ಅರ್ಥ :- ಪೂರ್ವಜನ್ಮದಲ್ಲಿ ಯಾವ ಮಾನವನು ದೇವ, ಧರ್ಮ, ಗುರುಗಳನ್ನು ಅಪಮಾನಿಸಿರುವನೋ, ಪೂರ್ವದ ದುಃಸಂಸ್ಕಾರದಿಂದ ಗುರುಗಳಲ್ಲಿ ಕೋಪಗೊಳ್ಳುತ್ತ ಅವರೊಡನೆ ವಾದ-ವಿವಾದ ಮಾಡಿರುವವನು ಸತ್ತು ಮುಂದಿನ ಭವದಲ್ಲಿ ಧಾರ್ಮಿಕ ಸಂಬಂಧವಾದ ಕಾರ್ಯಗಳಲ್ಲಿ ವಿವಾದವನ್ನೇ ಮಾಡುವವನಾಗುತ್ತಾನೆ.

ಭಾವಾರ್ಥ :- ಧರ್ಮಾತ್ಮರೊಡನೆ ವಿತಂಡವಾದಗೈಯುತ್ತ ಧರ್ಮದಲ್ಲಿ ಸಂಶಯವಿಟ್ಟುಕೊಂಡು ಸಮ್ಯಗ್ದರ್ಶನ ಧರ್ಮವನ್ನು ನಾಶಗೊಳಿಸಿ, ಮಿಥ್ಯಾತ್ವವನ್ನು ಬೆಳೆಸುವುದಕ್ಕಾಗಿ ಪ್ರಯತ್ನಿಸುವುದೆಂದರ್ಥವು. ಗುರುಗಳೊಡನೆ ವಿವಾದಗೈಯ್ಯಬಾರದು. ಯಾಕೆಂದರೆ ಗುರು ಆಜ್ಞೆಯು ಸದಾಕಾಲವು ಮಾನ್ಯವಾಗಿರುತ್ತದೆ. ಗುರುಗಳು ವೀತರಾಗರು, ಪರಿಗ್ರಹಗಳ ಆಶೆಯಿಲ್ಲದವರು ನಿರ್ಗ್ರಂಥರೂ ಆಗಿರುತ್ತಾರೆ. ಅಂತವರೊಡನೆ ಉದ್ಧಟವಾದ ವಿವಾದವು ಪಾಪಕ್ಕೆ ಕಾರಣವಾಗಿರುತ್ತದೆ. ಯಾರು ಪೂರ್ವದಲ್ಲಿ ರತ್ನತ್ರಯಧರ್ಮವನ್ನು ನಿಂದಿಸಿರುವರೋ, ಅಪಮಾನಿಸಿರುವರೋ, ಧಿಕ್ಕರಿಸಿರುವರೋ, ಮಹಾ ಹಾನಿಕಾರಕ ಪಾಪವನ್ನು ಮಾಡಿರುವವರು ಮರಣಾನಂತರ ಮರುಭವದಲ್ಲಿ ಗುರುಗಳೊಡನೆ, ಧರ್ಮಾತ್ಮರೊಡನೆ ಕಲಹ, ವಾದ-ವಿವಾದ ಮಾಡುವವನಾಗಿ ಜನಿಸುವನು.

ಮುಂದಕ್ಕೆ ರಾಜನು ಭಿಕ್ಷುಕನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪಾಪಾಚ್ಚ ವದ ಪ್ರಭೋ ! ಮೇ ।
ರಾಜಾಪಿ ಮೃತ್ವಾ ಭವತೀಹ ರಂಕಃ ॥

ಅರ್ಥ :- ಹೇ ಕೃಪಾನಿಧೇ ! ಯಾವ ಘೋರ ಪಾಪದ ಪ್ರಭಾವದಿಂದ ರಾಜನು ದರಿದ್ರ (ಭಿಕ್ಷುಕ) ನಾಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಧರ್ಮಾದಿ ಶೂನ್ಯೋ ವಿಷಯೇ ನಿಮಗ್ನೋ ।
ದ್ವೇಷೀ ಪ್ರಜಾನಾಂ ಪಶುವದ್ವಿಹಾರೀ ॥
ಮಾಂಸಾಶನೋ ಯೋ ಮದಿರಾ ಪ್ರಪಾಯಾ ।
ಮೃತ್ವಾ ಸ ರಾಜ ಭವತೀಹ ರಂಕಃ ॥ ೧೦೭ ॥



ಅರ್ಥ :- ಯಾವ ರಾಜನು ಧರ್ಮ-ಕರ್ಮ ರಹಿತನಾಗಿರುತ್ತಾನೆಯೋ, ಇಂದ್ರಿಯ ಲೋಲುಪಿಯೋ, ಪ್ರಜೆಗಳಲ್ಲಿ ದ್ವೇಷಭಾವನೆ ಇಟ್ಟುಕೊಂಡಿರುವನೋ, ಮದ್ಯ, ಮಾಂಸಾದಿ ಭಕ್ಷಣೆ, ಪಾನಾದಿಗಳಲ್ಲಿ ತನ್ಮಯನಾಗಿರುವನೋ ಅವನು ಸತ್ತು ಈ ಸಂಸಾರದಲ್ಲಿ ಮಹಾ ದರಿದ್ರನಾಗಿಯೇ ಜನಿಸುವನು.

ಭಾವಾರ್ಥ :- ರಾಜರು ಧರ್ಮಾತ್ಮರಾಗುವುದು ದೇಶಕ್ಕೂ, ಪ್ರಜೆಗಳಿಗೂ ಕ್ಷೇಮಕರವು. ರಾಜ ಧರ್ಮಾತ್ಮನಾದರೆ ಪ್ರಜೆಗಳು ಧರ್ಮಾತ್ಮರಾಗುವರು. ರಾಜನೇ ಪಾಪಿಷ್ಠನಾಗಿಬಿಟ್ಟರೆ ಪ್ರಜೆಗಳು ಪಾಪಕಾರ್ಯಾಸಕ್ತರಾಗಿ ರಾಜನನ್ನೇ ಅನುಸರಿಸುವರು. ಇವರಿಬ್ಬರು ಅಧರ್ಮ, ಅನ್ಯಾಯ ಮೊದಲಾದ ಪಾಪಕಾರ್ಯದಲ್ಲಿ ತೊಡಗಿಬಿಟ್ಟರೆ ರಾಜ್ಯಕ್ಕೆ ರಾಜ್ಯವೇ ನಾಶವಾಗಿ ಹೋಗುತ್ತದೆ. ತದ್ವಿಪರೀತವಾಗಿಬಿಟ್ಟರೆ (ಪುಣ್ಯ, ಉಪಕಾರ ಕಾರ್ಯಾಸಕ್ತರಾದರೆ) ರಾಜ್ಯದಲ್ಲಿ ಎಲ್ಲಿ ನೋಡಿದರೂ ಸುಖಿಶಾಂತಿಯೇ ತಲೆದೋರುವುದು, ಒಂದು ವೇಳೆ ರಾಜನು ಧರ್ಮ-ನ್ಯಾಯವಂಚಕನಾಗಿಬಿಟ್ಟರೆ ಧಾರ್ಮಿಕ, ಸತ್ಯದಿಂದಲೂ ವಂಚಿತನಾಗುತ್ತಾನೆ. ಅಂತಹ ಧರ್ಮವಂಚಿತನ, ವಿಷಯ ಲೋಲುಪನಾದ ರಾಜನು ಮರಣವನ್ನು ಹೊಂದಿ ಮರುಭವದಲ್ಲಿ ಬೇಡಿತಿನ್ನುವ ಭಿಕ್ಷುಕನಾಗಿಯೇ ಜನಿಸುವನು.

ಸದಾಕಾಲವು ಇಂದ್ರಿಯ ವಿಷಯ ಲೋಲುಪನಾದ ರಾಜನು ಧರ್ಮವನ್ನು, ಪ್ರಜೆಗಳ ಸುಖ-ಶಾಂತಿಯನ್ನು ಮರೆತುಬಿಡುವನು. ಧರ್ಮದ ರಕ್ಷಣೆಗೈಯ್ಯಲಾರನು. ಅವನನ್ನು ಪ್ರಜೆಗಳು ಹೀನದೃಷ್ಟಿಯಿಂದ ನೋಡುವರು. ಪ್ರಜೆಗಳನ್ನು ತನ್ನ ಮಕ್ಕಳೆಂದು ತಿಳಿದು ವರ್ತಿಸಬೇಕಾದ ಸ್ಥಾನದಲ್ಲಿ ಪಶುಗಳಿಗೆ ತೊಂದರೆ ಕೊಡುವಂತ ಪ್ರಜೆಗಳಿಗೆ ಕೂಡುತ್ತ ಮದ್ಯಪಾನ, ಮಾಂಸಭಕ್ಷಣೆ ತತ್ಪರನಾದ ರಾಜನು ದೀರ್ಘವಿಚಾರಿಸಿ, ಧರ್ಮ, ನ್ಯಾಯ, ಸತ್ಯಗಳನ್ನು ತ್ಯಜಿಸದಿರುವುದೇ ಶ್ರೇಯಸ್ಕರವು.

ಮುಂದಕ್ಕೆ ಕುದೇವ, ಕುಶಾಸ್ತ್ರ ಮತ್ತು ಕುಗುರುಗಳ ಆರಾಧಕನಾಗಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪಾಪಾಚ್ಚ ಕರೋತಿ ಜೀವಃ ।
ಕುದೇವ ಧರ್ಮಾದಿ ಗುರುಪ್ರಶಂಸಾಮ್ ॥

ಅರ್ಥ :- ಹೇ ಪ್ರಭುವೇ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಕುದೇವ, ಕುಶಾಸ್ತ್ರ ಮತ್ತು ಕುಗುರುಗಳನ್ನು ಪ್ರಶಂಸಿಸುವವನಾಗಿ ಜನಿಸುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಕುದೇವ ಶಾಸ್ತ್ರಸ್ಯ ಗುರೋಃ ಪುರಾ ಯೈಃ ।
ಶ್ರದ್ಧಾ ಕೃತಾ ವಾ ವಿನಯಾದಿ ಭಕ್ತಿಃ ॥
ಕುರ್ವಂತಿ ಸಂಸ್ಕಾರವಶಾತ್ತ ಏವ ।
ಪರತ್ರ ಲೋಕೇಽಪಿ ಚ ತತ್ಪ್ರಶಂಸಾಮ್ ॥ ೧೦೭ ॥

ಅರ್ಥ :- ಯಾವ ಜೀವಗಳು ತಮ್ಮ ಪೂರ್ವ ಜನ್ಮದಲ್ಲಿ ಕುದೇವ, ಕುಶಾಸ್ತ್ರ ಮತ್ತು ಕುಗುರುಗಳಲ್ಲಿ ಶ್ರದ್ಧೆಯನ್ನಿಟ್ಟುಕೊಂಡಿದ್ದರೋ, ಭಕ್ತಿಯಿಂದ, ವಿನಯದಿಂದ ವರ್ತಿಸಿದ್ದರೋ ಅಂತಹ ಜೀವಿಗಳು ಸತ್ತು ತಮ್ಮ ಪೂರ್ವದ ದುಃಸಂಸ್ಕಾರಗಳ ನಿಮಿತ್ತದಿಂದ ಪರಲೋಕದಲ್ಲಿ ಜನಿಸಿಯೂ ಕುದೇವಾದಿಗಳನ್ನೇ ಪ್ರಶಂಸಿಸುವವರಾಗುವರು.

ಭಾವಾರ್ಥ :- ಮಿಥ್ಯಾತ್ವ ಸಂಸ್ಕಾರವು ಜನ್ಮಜನ್ಮಾಂತರದವರೆಗೂ ಬಿಟ್ಟುಹೋಗದ ಪಿಶಾಚಿಯಾಗಿರುತ್ತದೆ. ಮಾನವ ಜನ್ಮದಲ್ಲಿ ಯಾರು ಗಾಢವಾದ ಮಿಥ್ಯಾತ್ವದಲ್ಲಿ ಮಗ್ನರಾಗಿದ್ದರಿಂದಲೇ ಪರಲೋಕದಲ್ಲಿಯೂ ಕೂಡಾ ಮಿಥ್ಯಾತ್ವದಲ್ಲಿ ತನ್ಮಯನಾಗಿ ಅದರ ತೀವ್ರ ಉದಯದಿಂದ ದರ್ಶನ ಮೋಹನೀಯ ಕರ್ಮದ ಬಂಧವಾಗುವುದು. ಅದರ ಉತ್ಕೃಷ್ಟಸ್ಥಿತಿಯು ಎಪ್ಪತ್ತು ಕೋಟಾಕೋಟಿ ಸಾಗರವಾಗಿರುತ್ತದೆ. ಅದು ಫಲವನ್ನು ಕೊಡುತ್ತಿರುತ್ತದೆ. ಇದೇ ಪ್ರಕಾರವಾಗಿ ಪ್ರತಿಸಮಯದಲ್ಲಿ ಬಂಧವಾಗುವ ಕರ್ಮವು ಅದು ತನ್ನ ಸ್ಥಿತಿ ಮತ್ತು ಅನುಭಾಗಕ್ಕನುಸಾರವಾಗಿ ಫಲಕೊಡುವುದು. ಅದಕ್ಕೆ ಅನುಗುಣವಾಗಿ ಆ ಜೀವನು ಮಿಥ್ಯಾತ್ವವನ್ನೇ ಸೇವಿಸಿಕೊಂಡಿರುತ್ತಾನೆ. ಆದ್ದರಿಂದ ಈ ಜೀವನು ಪೂರ್ವದಲ್ಲಿ ಕುದೇವಾದಿಗಳ ಶ್ರದ್ಧಾಭಕ್ತಿಯಿಂದಿದ್ದನೋ, ಆವನು ಮುಂದಿನ ಭವದಲ್ಲಿಯೂ ಕೂಡಾ ಅದೇ ಕುದೇವಾದಿಗಳ ಶ್ರದ್ಧಾನ, ವಿನಯ ಭಕ್ತಿ ಮಾಡುವವನು ಮತ್ತು ಪ್ರಶಂಸಿಸಿಕೊಂಡಿರುತ್ತಾನೆ. ಇದೆಲ್ಲವನ್ನು ತಿಳಿದು ಕಾಲಲಬ್ಧಿಯನ್ನು ಪಡೆದು ಭವ್ಯಾತ್ಮರು ಮಿಥ್ಯಾತ್ವವನ್ನು



ತ್ಯಜಿಸಿ ಶಾಸ್ತ್ರೋಕ್ತ ವಿಧಿಗನುಸಾರವಾಗಿ ಸಮ್ಯಗ್ದರ್ಶನವನ್ನು ಗ್ರಹಣೆಮಾಡಿಕೊಳ್ಳಬೇಕು. ಹೀಗೆ ಕೆಲವು ಜನ ವಿದ್ವಾಂಸರು ಮಿಥ್ಯಾತ್ವ ಸಂಸ್ಕಾರದಿಂದಲೇ ಶಾಸ್ತ್ರ ಗ್ರಂಥಗಳಲ್ಲಿ ಪಂಡಿತನಾಗಿದ್ದರೂ ಕೂಡಾ ವಿಪರೀತವಾಗಿಯೇ ನಡೆಯುತ್ತಾರೆ. ನಿಜವಾದ ವಸ್ತು ಸ್ವರೂಪವನ್ನು ಮಿಥ್ಯಾತ್ವವೆಂದು ಹೇಳಲು ಹಿಂಜರಿಯುವುದಿಲ್ಲವು. ಇಂತಹ ಜೀವಗಳು ಪರಲೋಕದಲ್ಲಿಯೂ ಕೂಡಾ ಮಿಥ್ಯಾತ್ವಿಗಳಾಗಿ ಆತ್ಮಘಾತವನ್ನು ಮಾಡಿಕೊಳ್ಳುತ್ತಾರೆ.

ಇನ್ನು ಮುಂದಕ್ಕೆ ಮನೆಯು ಗ್ರಹಸ್ಥಿಯಿಂದ ರಹಿತವಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪಾಪಾಚ್ಚ ವದ ಪ್ರಭೋ ! ಮೇ ।
ಮೃತ್ವಾ ನರಃ ಸ್ಯಾದ್ ಗ್ರಹದಾರಹೀನಃ ॥

ಅರ್ಥ :- ಹೇ ಕರುಣಾನಿಧೇ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಮನೆಯು ಗ್ರಹಸ್ಥಿಯಿಂದ ರಹಿತವಾಗುವುದೆಂಬುದನ್ನು ವಿವರಿಸಬೇಕು.

ಉತ್ತರ :- ಭಿತ್ವಾ ಗೃಹಾದಿಂ ಮಧುಮಕ್ಷಿಕಾನಾಂ ।
ವಾ ಪಕ್ಷಿಕಾನಾಂ ಚ ರಸಂ ಪಿಬಂತಿ ॥
ಲೋಭಾತ್ಪರೇಷಾಂ ಚ ಕಲೇವರಂ ಯೇ ।
ಭವಂತಿ ಕೌ ತೇ ಗ್ರಹದಾರಹೀನಾಃ ॥ ೧೦೮ ॥

ಅರ್ಥ :- ಯಾರು ಜೇನುನೊಣಗಳ ಗೂಡನ್ನು ಮುರಿದುಹಾಕಿ ಜೇನುರಸವನ್ನು ಸೇವಿಸುತ್ತಾರೆಯೋ, ಅನ್ಯಪಕ್ಷಿಗಳ ಗೂಡುಗಳನ್ನು ನಾಶಮಾಡಿ, ಆ ಪಕ್ಷಿಗಳನ್ನು ಹಿಡಿದು, ಕೊಂದು ಅವುಗಳ ಮಾಂಸವನ್ನು ತಿಂದು ಆನಂದಪಡುವ ನಿರ್ದಯಿ ಮಾನವನು ಮರಣವನ್ನು ಹೊಂದಿ ಮಾನವನಾಗಿ ಜನಿಸಿ ತನ್ನ ಮನೆ, ಹೆಂಡತಿ ಮೊದಲಾದ ಎಲ್ಲ ವಸ್ತುಗಳಿಂದ ರಹಿತನಾಗಿ ಒಬ್ಬಂಟಿಗನಾಗಿ ದುಃಖಕ್ಕೀಡಾಗುವನು.

ಭಾವಾರ್ಥ :- ಯಾವ ಪಕ್ಷಿಗಳ ಅಥವಾ ಪಶುಗಳ ವಾಸಸ್ಥಳಗಳನ್ನು

ಹಾಳುಮಾಡುವುದು ಘೋರಪಾಪಕ್ಕೆ ಕಾರಣಗಳಾಗಿರುತ್ತವೆ. ಮಧುಪಕ್ಷಿಗಳ ಗೂಡನ್ನು ನಾಶಮಾಡುವುದರಿಂದ ಅನೇಕ ಜೀವಗಳ ಹಿಂಸೆಯಾಗುತ್ತವೆ. ಮತ್ತು ಎಷ್ಟೋ ಜೀವಗಳು (ನೊಣಗಳು) ನಿರಾಶ್ರಿತವಾಗುತ್ತವೆ. ಜೇನುರಸದ ಸ್ಪರ್ಶದಿಂದ ಅದರಲ್ಲಿರುವ ಅನಂತ ಸೂಕ್ಷ್ಮ ಜೀವಗಳ ಘಾತವಾಗುತ್ತವೆ. ಇದೇ ಪ್ರಕಾರವಾಗಿ ಯಾವುದಾದರೊಂದು ಅನ್ಯ ಪಶು-ಪಕ್ಷಿಗಳ ವಧೆಯಿಂದ ಅವುಗಳ ಕುಟುಂಬಾದಿವರ್ಗಕ್ಕೂ ಅಸಹ್ಯವೇದನೆಯಾಗುತ್ತದೆ. ಆದ್ದರಿಂದ ಮಾನವನು ಯಾರ ಮನೆಯನ್ನಾಗಲೀ, ಗೂಡುಗಳನ್ನಾಗಲೀ ನಾಶಮಾಡಿದುದರ ಫಲವಾಗಿ ತನ್ನ ಆಯುಷ್ಯಾವಸಾನಾನಂತರ ಮರುಭವದಲ್ಲಿ ಮನೆ, ಮಠ, ಸ್ತ್ರೀ, ಪುತ್ರಾದಿಗಳಿಂದ ರಹಿತನಾಗಿ ಏಕಾಂಗಿಯಾಗಿ ಜೀವಿಸುವ ದುಃಖವನ್ನು ಸಹಿಸುವನು.

ಮುಂದಕ್ಕೆ ಕ್ರಿಮಿಕೀಟಗಳಾಗಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪಾಪಾಚ್ಚ ವದ ಪ್ರಭೋ ! ಮೇ ।
ಮೃತ್ವಾ ನರಃ ಸ್ಯಾತ್ಖಲು ಕೀಟಕಃ ಕಾ ॥

ಅರ್ಥ :- ಹೇ ಭಗವಾನ್ ! ಯಾವ ಯಾವ ಪಾಪಕಾರ್ಯಗಳ ಫಲವಾಗಿ ಈ ಜೀವನು ಸತ್ತು ಕ್ರಿಮಿಕೀಟಗಳಾಗಿ ಜನಿಸುವನೆಂಬುದನ್ನು ವಿವರಿಸಬೇಕು.

ಉತ್ತರ :- ರಕ್ಷಾ ಸಮಿತ್ಯಾ ಲಘು ಪ್ರಾಣಿನಾಂ ವಾ ।
ಕೃತಾ ನ ದೃಷ್ಟಾ ಗುರುದೇವಮುದ್ರಾ ॥
ದೀನಾ ನ ತುಷ್ಟಾ ಧನಗರ್ವಿತೈರ್ಯೈ ।
ರ್ಭವಂತಿ ದುಷ್ಟಾ ಭುವಿ ಕೀಟಕಾಸ್ತೇ ॥ ೧೮ ॥

ಅರ್ಥ :- ಯಾರು ಪಂಚ ಸಮಿತಿಗಳನ್ನು ಪರಿಪಾಲಿಸುತ್ತ ಸೂಕ್ಷ್ಮ ಪ್ರಾಣಿಗಳನ್ನು ರಕ್ಷಿಸುವುದಿಲ್ಲವೋ, ದೇವ, ಗುರು, ಶಾಸ್ತ್ರಗಳ ದರ್ಶನಗೈಯುವುದಿಲ್ಲವೋ, ಮತ್ತು ಧನಮದದಿಂದ ಮದೋನ್ಮತ್ತನಾಗಿ ದೀನದಲಿತರಿಗೆ ಸಹಾಯಮಾಡುವುದಿಲ್ಲವೋ ಅಂತಹ ಮಾನವನು ಮರಣಾನಂತರ ಪರಜನ್ಮದಲ್ಲಿ ಕ್ರಿಮಿಕೀಟವಾಗಿಯೇ ಜನಿಸುವನು.



ಭಾವಾರ್ಥ :- ಚಿಕ್ಕ ಚಿಕ್ಕ ಶರೀರಧಾರಿಗಳಾದ ಜೀವಗಳು ಅಲ್ಪಸ್ವಲ್ಪ ಕಾರಣಗಳಿಂದಲೇ ಸಾಯುತ್ತವೆ. ಕೆಲವು ಜೀವಗಳು ಕಾಲಡಿಯಲ್ಲಿ ಸಿಲುಕಿ ಮರಣವನ್ನು ಹೊಂದುತ್ತವೆ. ಮತ್ತೆ ಕೆಲವು ಜೀವಗಳು ಗೋಮಯ (ಸಗಣಿ) ಮತ್ತು ಮಲ-ಮೂತ್ರಾದಿಗಳಲ್ಲಿ ಸಿಲುಕಿಯೂ ಹಾಗೆ ಕೆಲವು ಜೀವಗಳು ನೀರಿನ ಹೊಡೆತಕ್ಕೆ ಸಿಲುಕಿ ಆಹುತಿಯಾಗುತ್ತವೆ. ಇಂತಹ ಸೂಕ್ಷ್ಮ ಜೀವಗಳ ರಕ್ಷಣೆಯನ್ನು ಮಾಡದ ಮಾನವನು, ಭೂಮಿಯನ್ನು ನೋಡಿಕೊಂಡು ಸಂಚರಿಸುವುದಿಲ್ಲವೋ, ನೋಡಿ, ಪರಿಶೋಧಿಸಿ ಪದಾರ್ಥಗಳನ್ನು ತೆಗೆದುಕೊಳ್ಳುವುದಾಗಲಿ, ಇಡುವುದಾಗಲಿ ಮಾಡುವುದಿಲ್ಲವೋ, ಭೂಮಿಯನ್ನು ನೋಡಿಕೊಂಡು ಮಲ-ಮೂತ್ರಾದಿಗಳ ವಿಸರ್ಜನೆ ಮಾಡುವುದಿಲ್ಲವೋ ಇವೇ ಮೊದಲಾದ ಕಾರ್ಯಗಳಲ್ಲಿ ಸೂಕ್ಷ್ಮ ಜೀವಗಳನ್ನು ಘಾತಿಸುವವನು ಸತ್ತು ಮುಂದಿನ ಭವದಲ್ಲಿ ಕ್ರಿಮಿಕೀಟಗಳ ಪರ್ಯಾಯವನ್ನು ಪಡೆದು ಅನ್ಯಜೀವಿಗಳಿಂದ ಕೊಲ್ಲಲ್ಪಡುವನು.

ಇದೇ ಪ್ರಕಾರವಾಗಿ ಯಾರು ದೇವ, ಗುರು, ಶಾಸ್ತ್ರಗಳ ದರ್ಶನ ಮಾಡುವುದಿಲ್ಲವೋ, ಗುರೂಪದೇಶವನ್ನು ಕೇಳುವುದಿಲ್ಲವೋ ಅವರಲ್ಲಿ ನಂಬಿಕೆ ಭಕ್ತಿಯನ್ನಿಡುವುದಿಲ್ಲವೋ ಮತ್ತು ದೀನದಲಿತಾದಿ ದರಿದ್ರರಿಗೆ ಧನಧಾನ್ಯಾದಿ ಸಹಾಯಮಾಡಿ ಸಂತೋಷಪಡಿಸುವುದಿಲ್ಲವೋ, ಸದಾಕಾಲ ಧನಮದದಿಂದ ಉನ್ಮತ್ತನಾಗುವವನು ಕ್ರಿಮಿಕೀಟಗಳಾಗಿಯೇ ಜನಿಸುವನು. ಆದ್ದರಿಂದ ಭವ್ಯಾತ್ಮರು ಸೂಕ್ಷ್ಮ ಜೀವಗಳ ರಕ್ಷಣೆ, ದೀನದರಿದ್ರರಿಗೆ ಸಹಾಯಮಾಡುವುದೇ ಆತ್ಮಶಾಂತಿಯ ಸರಳ ಉಪಾಯವಾಗಿರುತ್ತದೆ.

ಮುಂದಕ್ಕೆ ಶಕ್ತಿಹೀನನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪಾಪಾಚ್ಚ ವದ ಪ್ರಭೋ ! ಮೇ ।
ಮೃತ್ವಾನರಃ ಸ್ಯಾದ್ಭುವಿ ಶಕ್ತಿಹೀನಃ ॥

ಅರ್ಥ :- ಹೇ ಪರಮ ಗುರುವೇ ! ದಯಮಾಡಿ ಈ ಜೀವನು ಯಾವ ಪಾಪಕೃತಿಯನ್ನು ಮಾಡಿರುವುದರ ಫಲವಾಗಿ ಮರುಭವದಲ್ಲಿ ನಿರ್ಬಲ (ಶಕ್ತಿಹೀನ)ನಾಗಿ ಜನಿಸುವುದೆಂಬುದನ್ನು ವಿವರಿಸಬೇಕು.

ಉತ್ತರ :- ಸ್ವಾರ್ಥಾಭಿ ಸಿದ್ಧ್ಯೈ ಸ್ವಬಲೇನ ಜಂತೂನ್ ।
ಹತ್ವಾಚ ಭೀತಿಂ ಖಲು ದರ್ಶಯಿತ್ವಾ ॥
ಬದ್ಧ್ವಾಸದಾಃ ಬಂಧಿಗೃಹೇ ಜನಾಯ್ಯೈ
ಮೃತ್ವಾ ಖಲಾಸ್ತೇ ಚ ಭವಂತ್ಯಶಕ್ತಾ ॥ ೧೧೦ ॥

ಅರ್ಥ :- ಯಾವ ನಿರ್ದಯಿ ಮನುಜನು ತನ್ನ ಸ್ವಾರ್ಥ ಸಿದ್ಧಿಯ ನಿಮಿತ್ತದಿಂದ ಸಾಧನೆಗೋಸ್ಕರ ತನ್ನ ಸಾಮರ್ಥ್ಯದಿಂದ ಭಯವನ್ನು ತೋರಿಸಿ ಅನ್ಯ ಬಡ ಪ್ರಾಣಿಗಳನ್ನು ಹಿಂಸಿಸುತ್ತಾನೆಯೋ ಅಥವಾ ಬಂಧಿಸಿ ಬಂಧನದಲ್ಲಿಟ್ಟು ಪೀಡಿಸುವ ಮಾನವನು ಸತ್ತು ಪರಲೋಕದಲ್ಲಿ ಶಕ್ತಿ ಹೀನನಾಗಿಯೆ ಜನಿಸುವನು.

ಭಾವಾರ್ಥ :- ಬಲಿಷ್ಠನಾದವನು ನಿರ್ಬಲರನ್ನು ಬೆದರಿಸುವುದು, ತನ್ನ ಕಾರ್ಯಸಿದ್ಧಿಗಾಗಿ ತನಗಾಗದವರನ್ನು ಬಂಧನದಲ್ಲಿಡಿಸುವುದು, ಅವರ ಧನ ಧಾನ್ಯಾದಿಗಳನ್ನು ಲೂಟಿ ಮಾಡಿಸುವುದು, ಮನೆ ಮಠಗಳನ್ನು ಕೊಳ್ಳೆ ಮಾಡಿಸುವುದು. ಇವೇ ಮೊದಲಾದ ನಿರ್ದಯ ಕಾರ್ಯಗಳನ್ನು ಮಾಡುವ ಮತ್ತು ಮಾಡಿಸುವ ದುರಹಂಕಾರೀ ಮಾನವನು ಸತ್ತು ಮರುಭವದಲ್ಲಿ ಜನ್ಮತಾಳಿ ಯಾವ ಶಕ್ತಿ ಸಾಮರ್ಥ್ಯವಿಲ್ಲದವನಾಗಿ ಸರ್ವರಿಂದ ಉಪದ್ರವಿಸಲ್ಪಡುವವನಾಗುವನು. ಆದ್ದರಿಂದ ಬಲವಂತರು ದೀನ ದುಃಖಿಗಳಿಗೆ ಉಪದ್ರವಿಸದೆ, ತಮ್ಮಿಂದ ಸಾಧ್ಯವಾದಮಟ್ಟಿಗೆ ಸಹಾಯವನ್ನೀಡುವುದು ಪರಮ ಕರ್ತವ್ಯವಾಗಿರುತ್ತದೆ.

ಮುಂದಕ್ಕೆ ಉತ್ತಮ ಕಾರ್ಯವನ್ನು ಮಾಡುತ್ತಿದ್ದರೂ ಸಹ ಲೋಕ ನಿಂದೆಗೆ ಪಾತ್ರನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ನಿಂದ್ಯೈವ ಸತ್ಕಾರ್ಯ ಕೃತೇಽಪಿ ಕಸ್ಮಾತ್ ।
ಕರ್ಮೋದಯಾತ್ಸ್ಯಾದ್ಭವತೀಹ ಲೋಕೇ ॥

ಅರ್ಥ :- ಹೇ ಸದ್ಗುರುವೇ ! ಎಂತಹ ಪಾಪ ಕಾರ್ಯಗಳನ್ನು ಮಾಡಿರುವುದರಿಂದ ಅಥವಾ ಯಾವ ಪಾಪ ಕರ್ಮದ ಉದಯದಿಂದ ಉತ್ತಮ



ಕಾರ್ಯಗಳನ್ನು ಮಾಡುತ್ತಿದ್ದರೂ ಲೋಕನಿಂದೆಗೆ ಗುರಿಯಾಗಲು ಕಾರಣವೇನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಸತ್ಕಾರ್ಯಕರ್ತುರ್ಭುವಿ ದೀನಬಂಧೋಃ ।
ಸಂಪೂರ್ಣವಿಶ್ವೇ ಯತತಃ ಪ್ರಶಾಂತ್ಯೈ ॥
ನಿಂದಾಕೃತಾ ಯೇನ ನಿರೋತ್ತಮಸ್ಯ ।
ಸ್ಯಾದೇವ ಸತ್ಕಾರ್ಯಕೃತೇಽಪಿ ತಸ್ಯ ॥ ೧೧೧ ॥

ಅರ್ಥ :- ಸಂಸಾರದಲ್ಲಿ ಸದಾಕಾಲವು ಉತ್ತಮ ಕಾರ್ಯಗಳನ್ನು ಮಾಡುವವರನ್ನು, ದೀನ ದುಃಖಿದಾರಿದ್ರ್ಯಾದಿಗಳಿಗೆ ಸಹಾಯ ಮಾಡುವವರನ್ನು, ಸಂಸಾರದಲ್ಲಿ ಶಾಂತಿ-ಸಮಾಧಾನವನ್ನು ಸ್ಥಾಪಿಸಲು ಸತತವಾಗಿ ಪ್ರಯತ್ನಿಸುವವರನ್ನು ಕಂಡು ಯಾವ ನೀಚನು ಬಾಯಿಗೆ ಬಂದಂತೆ ದೂಷಿಸಿ, ನಿಂದಿಸಿಕೊಂಡಿರುವವನು ಮರುಭವದಲ್ಲಿ ಒಳ್ಳೆ ಕೆಲಸಕಾರ್ಯಗಳನ್ನು ಮಾಡುತ್ತಿದ್ದರೂ ಆತನನ್ನು ಕಂಡ-ಕಂಡವರು ನಿಂದಿಸಿಕೊಂಡಿರುತ್ತಾರೆ.

ಭಾವಾರ್ಥ :- ಲೋಕದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದರೂ ಸಹ ಅವರು ಲೋಕಾಪವಾದಕ್ಕೆ ಗುರಿಯಾಗುತ್ತಿದ್ದರೆ ಅದು ಮಹಾ ಪಾಪ ಕರ್ಮವೆಂದೇ ನಿಶ್ಚಯಿಸಿಕೊಳ್ಳಬೇಕು. ಯಾರು ಉತ್ತಮ ಗುಣವಂತರನ್ನು, ಸತ್ಕಾರ್ಯಗಳಲ್ಲಿ ತತ್ಪರರಾದವರನ್ನು, ಧರ್ಮಾತ್ಮರನ್ನು ಮತ್ತು ಧಾರ್ಮಿಕ ಕ್ರಿಯೆಗಳನ್ನು ನಿಂದಿಸಿಕೊಂಡಿರುವರೋ, ಆರ್ಷ ವಚನಗಳ ವಿರುದ್ಧವಾಗಿ ವರ್ತಿಸುವುದು ಮತ್ತು ನೀತಿ ವಿರುದ್ಧ ಕಾರ್ಯಗಳನ್ನು ಮಾಡುವುದು ಇವೇ ಮೊದಲಾದ ಅಧರ್ಮ ಕಾರ್ಯಗಳನ್ನೆಸಗುವವನು ಪರಲೋಕದಲ್ಲಿ ಒಳ್ಳೆ ಕೆಲಸಗಳನ್ನು ಮಾಡುತ್ತಿದ್ದರೂ ಒಂದಿಲ್ಲೊಂದು ವಿಧದಿಂದ ಲೋಕಾಪವಾದಕ್ಕೆ ಗುರಿಯಾಗುತ್ತಾನೆ. ಆದ್ದರಿಂದ ಧರ್ಮವಿರುದ್ಧ ನೀತಿ ವಿರುದ್ಧ ಕಾರ್ಯಗಳಿಂದ ದೂರವಿರುವುದು ಶ್ರೇಯಸ್ಕರವಾಗಿದೆ.

ಮುಂದಕ್ಕೆ ಸತ್ಕಾರ್ಯವನ್ನು ಮಾಡಿದರೂ ಧನಹಾನಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪಾಪಾಚ್ಚ ಭವೇದ್ಧ ನಾದೇಃ ।
ಸದಾ ಹಿ ಸತ್ಕಾರ್ಯಕೃತೇಽಪಿ ಹಾನಿಃ ॥

ಅರ್ಥ :- ಹೇ ಭಗವಾನ್ ! ಈ ಮಾನವನು ಲೋಕೋತ್ತಮ ಕಾರ್ಯಗಳನ್ನು ಮಾಡುತ್ತಿದ್ದರೂ ತನ್ನ ಧನಾದಿಗೆ ಹಾನಿಯುಂಟಾಗಲು ಕಾರಣವನ್ನು ವಿವರಿಸಬೇಕು.

ಉತ್ತರ :- ದಾನಾದಿ ಪೂಜಾಂ ನ ಜಪಂ ತಪೋಹಿ ।
ಕೃತ್ವಾ ನ ಧರ್ಮಂ ಭುವಿ ಕೇವಲಂ ಯಃ ॥
ಧನಾರ್ಜನೇ ಸ್ಯಾನ್ನಿರತಶ್ಚ ತಸ್ಯ ।
ಹಾನಿಃ ಸುಸತ್ಕಾರ್ಯಕೃತೇ ಧನಾದೇಃ ॥ ೧೧೨ ॥

ಅರ್ಥ :- ಯಾರಿಗೆ ದಾನ, ಪೂಜೆ, ಜಪ, ತಪ ಮೊದಲಾದ ಧಾರ್ಮಿಕ ಕಾರ್ಯಗಳಲ್ಲಿ ಮನಸ್ಸಿಲ್ಲವೋ, ಕೇವಲ ಧನಸಂಪಾದನೆ ಕಾರ್ಯದಲ್ಲಿ ಮಗ್ನನಾಗಿರುವನೋ ಅವನು ಸತ್ತು ಪರಲೋಕದಲ್ಲಿ ಜನಿಸಿ, ಯದಿ ಶ್ರೇಷ್ಠ ಕಾರ್ಯಗಳನ್ನು ಮಾಡುತ್ತಿದ್ದರೂ ಕೂಡಾ ಆತನ ಧನಸಂಪತ್ತಿಯು ನಷ್ಟವಾಗುತ್ತದೆ.

ಭಾವಾರ್ಥ :- ಧನಸಂಪಾದಿಸುವುದರ ಜೊತೆಯಲ್ಲಿ ಧಾರ್ಮಿಕ ಕ್ರಿಯೆಗಳನ್ನು ನಡೆಸಿಕೊಂಡು ಹೋಗುವುದು ಅತ್ಯಾವಶ್ಯಕವಾಗಿರುತ್ತದೆ. ಭಗವಾನ್ ಸರ್ವಜ್ಞ ದೇವನ ಪೂಜೆ, ಸದ್ಗುರುಗಳ ಸೇವೆ, ಶುಶ್ರೂಷೆ, ಶಾಸ್ತ್ರಸ್ವಾಧ್ಯಾಯ, ಮೊದಲಾದ ಕ್ರಿಯೆಗಳಲ್ಲಿ ಅಲ್ಪ-ಸ್ವಲ್ಪ ದ್ರವ್ಯವನ್ನು ಉಪಯೋಗಿಸುವುದು, ಅರ್ಥಾತ್ ತನ್ನ ಸಂಪಾದನೆಯ ನಾಲ್ಕನೆ ಒಂದು ಭಾಗದಷ್ಟು ಅಥವಾ ಹತ್ತನೆ ಒಂದು ಭಾಗವಾದರೂ ಧರ್ಮಕಾರ್ಯಗಳಿಗೆ ಮೀಸಲಾಗಿರಿಸಬೇಕು. ಈ ಕಾರ್ಯಗಳಲ್ಲದೆ ತೀರ್ಥಕ್ಷೇತ್ರ, ಗುರುದರ್ಶನ, ಗುರುಸೇವೆ ಮೊದಲಾದ ಧಾರ್ಮಿಕಕಾರ್ಯಗಳಲ್ಲಿ ಶಕ್ತಿಗನುಸಾರ ಧನವನ್ನು ಉಪಯೋಗಿಸುವುದು ಪ್ರತಿಯೊಬ್ಬ ಗೃಹಸ್ಥನ ಆದ್ಯ ಕರ್ತವ್ಯವಾಗಿರುತ್ತದೆ. ಧನಸಂಪಾದಿಸುವಾಗ ಪಾಪ ಬಂಧವಾಗುತ್ತಿರುತ್ತದೆ. ಒಂದು ವೇಳೆ ಆ ಧನವನ್ನು ಯಾವುದಾದರೊಂದು ಒಳ್ಳೆ ಕಾರ್ಯದಲ್ಲಿ ಉಪಯೋಗಿಸದಿದ್ದರೆ ಪಾಪವೇ ಬಾಕಿಯಾಗುವುದು.



ಒಂದುವೇಳೆ ಅಂತಹ ಧನವನ್ನು ಉತ್ತಮ ಕಾರ್ಯದಲ್ಲಿ ಉಪಯೋಗಿಸುತ್ತಿದ್ದರೆ ಪುಣ್ಯ ಪ್ರಾಪ್ತಿಯಾಗುತ್ತದೆ. ಉತ್ತಮ ಕಾರ್ಯಗಳಲ್ಲಿ ಉಪಯೋಗಿಸದವನು ಮುಂದಿನ ಭವದಲ್ಲಿ ಜನಿಸಿ ಉತ್ತಮ ಕಾರ್ಯಗಳನ್ನು ಮಾಡುತ್ತಿದ್ದರೂ ಕೂಡಾ ಆತನ ಧನವು ನಾಶವಾಗುತ್ತ ಹೋಗುವುದು. ಭವ್ಯಾತ್ಮರು ತಾವು ಸಂಪಾದಿಸಿದ ದ್ರವ್ಯದಲ್ಲಿ ಕೆಲವುಭಾಗ ಧಾರ್ಮಿಕಕಾರ್ಯಗಳಿಗೆ ಉಪಯೋಗಿಸುವುದು ಶ್ರೇಯಸ್ಕರವು.

ಮುಂದಕ್ಕೆ ಅನಾವೃಷ್ಟಿಗೆ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪಾಪಾಚ್ಚ ವದ ಪ್ರಭೋ ! ಮೇ ।
ಕಾಲೇ ಹಿ ಕಾಲೇ ನ ಭವೇತ್ಸುವೃಷ್ಟಿಃ ॥

ಅರ್ಥ :- ಹೇ ಪರಮ ದೇವನೇ ! ಯಾವ ಘೋರ ಪಾಪದ ಉದಯದಿಂದ ಕಾಲ-ಕಾಲಕ್ಕೆ ಮಳೆಹೊಯ್ಯದಿರಲು ಕಾರಣವನ್ನು ದಯವಿಟ್ಟು ಹೇಳಬೇಕು.

ಉತ್ತರ :- ನ ಧಾರ್ಮಿಕಾ ವಾ ಮುನಯೋ ನ ಯತ್ರ ।
ನ ದೇವ ಪೂಜಾ ನ ಚ ಪಾತ್ರದಾನಂ ॥
ದುಷ್ಟಾ ಜನಾ ಯತ್ರ ವಸಂತಿ ತತ್ರ ।
ವೃಷ್ಟಿರ್ನ ಶಾಂತಿಶ್ಚ ಭವೇತ್ಕದಾಪಿ ॥ ೧೧೩ ॥

ಅರ್ಥ :- ಯಾವ ಪ್ರಾಂತದಲ್ಲಿ ಧಾರ್ಮಿಕರ, ಮಹಾಮುನಿಗಳ ವಿಹಾರ ವಿಲ್ಲವೋ, ದೇವಪೂಜಾದಿ ಸತ್ಕಾರ್ಯಗಳು ನಡೆಯುವುದಿಲ್ಲವೋ, ಕೇವಲ ದುಷ್ಟಸ್ವಭಾವದ, ಅಧರ್ಮಿಗಳ ನೆಲೆಬೀಡಾಗಿರುವಲ್ಲಿ ವೃಷ್ಟಿಯಾಗಲೀ ಶಾಂತಿ-ಸಮಾಧಾನಗಳಾಗಲೀ ಉಂಟಾಗಲಾರವು.

ಭಾವಾರ್ಥ :- ಯಾವ ದೇಶದಲ್ಲಿ ಧರ್ಮಾತ್ಮರಾದ ಪುಣ್ಯಜೀವಿಗಳು ಬಂದು ಅವತರಿಸುತ್ತವೆಯೋ, ಅಲ್ಲಿ ಪ್ರತಿನಿತ್ಯವೂ ದೇವಪೂಜೆ, ಪಂಚಕಲ್ಯಾಣಾದಿ ಮಹಾಪೂಜೆಗಳು, ದಿಗಂಬರ ಮಹಾಯೋಗಿಗಳ ವಿಹಾರವೂ, ಅವರಿಗೆ ಆಹಾರಾದಿ ದಾನಗಳು ನಡೆಯುತ್ತಿರುತ್ತವೆ. ಆ ಯೋಗಿಗಳಿಂದ

ಧರ್ಮೋಪದೇಶಗಳು ಸಾಂಗೋಪಾಂಗ ನಡೆಯುತ್ತ ಧರ್ಮಪ್ರಭಾವನಾ ಕಾರ್ಯಗಳು ಜರಗುವ ಪಾವನಭೂಮಿಯಲ್ಲಿ ಕಾಲ-ಕಾಲಕ್ಕೆ ಸುವೃಷ್ಟಿಯಾಗುತ್ತಿರುತ್ತದೆ. ಆದರೆ ಮೇಲ್ಕಂಡ ಕಾರ್ಯಗಳು ನಡೆಯದ ಭೂಮಿಯಲ್ಲಿ ದುರ್ಜನರ, ಪುಂಡರ, ಅಧರ್ಮಿಗಳ ಸಂಖ್ಯೆಯು ಹೆಚ್ಚಾಗಿ ವೃಷ್ಟಿಯು, ಸುಖ-ಶಾಂತಿಯು ದೂರವಾಗಿ ಹೋಗುವುದು.

ಮುಂದಕ್ಕೆ ಪುಣ್ಯಕಾರ್ಯಾಸಕ್ತರೊಡನೆ ವೈರ, ವಿರೋಧವುಂಟಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪಾಪಾಚ್ಚ ವದ ಪ್ರಭೋ ! ಮೇ ।
ಸುಪುಣ್ಯಕರ್ತುಶ್ಚ ಪರೈರ್ವಿರೋಧಃ ॥

**ಅರ್ಥ** :- ಹೇ ದೇವಾಧಿದೇವನೇ ! ಈ ಜೀವನು ಯಾವ ಪಾಪಕರ್ಮದ ತೀವ್ರ ಉದಯದಿಂದ ಪುಣ್ಯಾತ್ಮರೊಡನೆ ವೈರ, ಶತ್ರುತ್ವವೆಸಗಲು ಕಾರಣವನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಪೂರ್ವಂ ಮಿಥೋ ವೈರವಿರೋಧ ಕರ್ತುಃ ।
ಸಂಗಃ ಕೃತೋ ಯೇನ ಖಲಾದಿಸೇವಾ ॥
ತಸ್ಯೈವ ಸಂಸ್ಕಾರ ವಶಾತ್ಸಮಂ ಸಃ ।
ಕರೋತಿ ವೈರಂ ಶುಭಕೃತ್ಯಕರ್ತುಃ ॥ ೧೧೪ ॥

**ಅರ್ಥ** :- ಯಾವ ಮನುಜನು ತನ್ನ ಮೊದಲಿನ ಜನ್ಮದಲ್ಲಿ ವೈರ, ವಿರೋಧ ಮಾಡುವವರ ಸಂಗತಿ ಗೈದಿದ್ದನೊ, ದುರ್ಜನರ, ನೀಚರ ಸೇವೆಯಲ್ಲಿ ತತ್ಪರನಾಗಿದ್ದನೋ ಅಂತಹ ಮಾನವನು ಪರಲೋಕದಲ್ಲಿ ಜನಿಸಿ, ಪೂರ್ವಜನ್ಮದ ದುಃಸಂಸ್ಕಾರ ಪ್ರಭಾವದಿಂದ ಪುಣ್ಯಕಾರ್ಯಾಸಕ್ತರೊಡನೆ ವೈರ ವಿರೋಧವನ್ನೇ ಸಾಧಿಸಿಕೊಂಡಿರುತ್ತಾನೆ.

**ಭಾವಾರ್ಥ** :- ವಿರೋಧ ಭಾವನೆಯು ಪಾಪಬಂಧಕ್ಕೆ ಕಾರಣವಾಗಿದೆ. ಪುಣ್ಯ ಕೆಲಸಗಳನ್ನು ಮಾಡುವವರೊಡನೆ ವಿರೋಧ ಗೈಯುವುದು ಘೋರ ಪಾಪಬಂಧಕ್ಕೆ ಕಾರಣವಾಗದೆ ಮತ್ತೇನು? ಹೀಗಿರುವಾಗ ಯಾವನು





ವಿನಾಕಾರಣ ಸಜ್ಜನ ಪುರುಷರೊಡನೆ ವಿರೋಧ, ದುರ್ಜನರ ಗೆಳೆತನ, ಉತ್ತಮ ಕಾರ್ಯಗಳಲ್ಲಿ ವಿಘ್ನ ಇವೇ ಮೊದಲಾದವು ಪಾಪಕಾರ್ಯಗಳಾಗಿರುತ್ತವೆ. ಈ ದುಃಸಂಸ್ಕಾರವು ಬೆಳೆದು ಸತ್ಕಾರ್ಯಗಳಿಗೆ ವಿರೋಧವನ್ನುಂಟು ಮಾಡುತ್ತವೆ. ಈ ವಿಚಾರವನ್ನು ತಿಳಿದು ಭವ್ಯಾತ್ಮರು ದುರ್ಜನ ಸಂಘವನ್ನು, ವೈರ ವಿರೋಧ ಭಾವದಿಂದ ದೂರವಿರುವುದೇ ಕ್ಷೇಮಕರವಾಗಿದೆ.

ಮುಂದಕ್ಕೆ ವಿಪರೀತ ಬುದ್ಧಿಯುಂಟಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪಾಪಾಚ್ಚ ಭವೇನ್ನರಾಣಾಂ ।
ವಿನಾಶ ಕಾಲೇ ವಿಪರೀತ ಬುದ್ಧಿಃ ॥

**ಅರ್ಥ** :- ಹೇ ಪ್ರಭುವೇ ! ಯಾವ ಕರ್ಮದ ಫಲವಾಗಿ ಮಾನವನ ಬುದ್ಧಿಯು ವಿನಾಶ ಕಾಲದಲ್ಲಿ ವಿಪರೀತ ರೂಪ ಪರಿಣತವಾಗಲು ಕಾರಣವನ್ನು ವಿವರಿಸಬೇಕು.

ಉತ್ತರ :- ಕಾಲೋತ್ಥಬುದ್ಧೇಃ ಸುಖಶಾಂತಿದಾತ್ರ್ಯಾ ।
ನಾಶಾಯ ಯತ್ನೋ ಹಿ ಕೃತಶ್ಚಯೇನ ॥
ತಸ್ಯೈವ ಹಾನಿಶ್ಚ ಸದಾಪಮಾನೋ ।
ವಿನಾಶಕಾಲೇ ವಿಪರೀತಬುದ್ಧಿಃ ॥ ೧೧೫ ॥

**ಅರ್ಥ** :- ಪುಣ್ಯಶಾಲಿಗಳ ಮತ್ತು ಜ್ಞಾನಿಗಳ ಬುದ್ಧಿಯು ಸುಖ ಶಾಂತಿಯನ್ನು ಉಂಟುಮಾಡುವಂಥದ್ದಾಗಿದೆ. ಅದನ್ನು ನಾಶ ಮಾಡುವುದಕ್ಕಾಗಿ ಯತ್ನಿಸುವುದು ಇದರಿಂದ ಸದಾ ಸರ್ವತ್ರ ಅಪಮಾನಿತನಾಗುವನು. ಅಷ್ಟೇ ಅಲ್ಲ; ಆತನ ಅಧಃಪತನದ ಕಾಲವು ಸಮೀಪಿಸುವಾಗಲೇ ವಿಪರೀತ ಬುದ್ಧಿಯುಂಟಾಗುವುದೆಂದು ಭಾವಿಸಬೇಕು.

**ಭಾವಾರ್ಥ** :- ಉತ್ತಮ ಬುದ್ಧಿ ; ಜ್ಞಾನವನ್ನು ನಾಶ ಮಾಡುವುದು ಆತ್ಮನ ನಿರ್ಮಲತೆಯನ್ನು ಘಾತ ಮಾಡುವುದೆಂದರ್ಥವು. ಯಾಕೆಂದರೆ ಜ್ಞಾನವು ಆತ್ಮನ ಲಕ್ಷಣವಾಗಿರುತ್ತದೆ. ಜ್ಞಾನದಿಂದಲೇ ಆತ್ಮನ ಅಸ್ತಿತ್ವವನ್ನು ಒಪ್ಪಲು ಸಾಧ್ಯವಾಗುತ್ತದೆ. ಅಂತಹ ಜ್ಞಾನವನ್ನು ನಾಶಮಾಡುವುದೆಂದರೆ ಆತ್ಮನ

ಉಚ್ಚತ್ವವನ್ನು, ನಿರ್ಮಲತೆಯನ್ನು ಮತ್ತು ಶ್ರೇಷ್ಠತೆಯನ್ನು ನಾಶಮಾಡುವುದೆಂಬ ಭಾವವು. ಆದರೆ ಈ ಪ್ರಕಾರ ಆತ್ಮನ ಪ್ರವಿತ್ರತೆಯನ್ನು ನಾಶಮಾಡುವುದು ಮಹಾ ಪಾಪಕ್ಕೆ ಕಾರಣವಾಗಿರುತ್ತದೆ. ಈ ಪಾಪದ ಫಲದಿಂದಲೇ ಜೀವನು ಪರಜನ್ಮವನ್ನು ತಾಳಿದಾಗ ಸ್ಥಾನ ಸ್ಥಾನಗಳಲ್ಲಿ ಹಾನಿಯೇ ತಲೆದೋರುವುದು. ತನ್ನ ನಾಶವಾಗುವ ಕಾಲವು ಸಮೀಪಿಸುವಾಗಲೇ ಬುದ್ಧಿ ವಿಪರೀತವಾಗಿ ಪ್ರವರ್ತಿಸುವುದು. ಇದರಿಂದ ನರಕ ನಿಗೋದಾದಿಗಳಿಗೆ ಪಾತ್ರನಾಗುತ್ತಾನೆ. ಆದ್ದರಿಂದ ಯಾವ ಭವ್ಯಾತ್ಮರು ಪರ ಜೀವಿಗಳ ಬುದ್ಧಿ ಜ್ಞಾನವನ್ನು ಹಾಳುಮಾಡುವುದಕ್ಕಾಗಿ ಯತ್ನಿಸಬಾರದು. ಒಂದುವೇಳೆ ಯಾರ ಬುದ್ಧಿಯು ಕೆಟ್ಟು ಹೋಗುವುದೆಂಬುದಾಗಿ ತಿಳಿದು ಬಂದರೆ ಸುಧಾರಿಸುವುದೇ ಆತ್ಮ ಕಲ್ಯಾಣದ ಸರಳ ಮಾರ್ಗವಾಗಿರುತ್ತದೆ.

ಮುಂದಕ್ಕೆ ಈ ಅಧ್ಯಾಯದ ಪಠಣ ಪಾಠನದ ಅಭಿಪ್ರಾಯವನ್ನು ವಿವರಿಸುತ್ತಾರೆ.

ಉತ್ತರ :- ಜ್ಞಾತ್ವೇತಿ ನಿಂದ್ಯಂ ವಿಷಮ ವ್ಯಥಾದಂ ।
ತ್ಯಕ್ತ್ವಾಪಿ ಕುರ್ವಂತ್ವ ಶುಭೋಪಯೋಗಮ್ ॥
ಶುಭೋಪಯೋಗಂತ್ವಕ್ಷ ಸುಖಾದಿ ಮೂಲೇ ।
ವೃತ್ತಿಂಚ ಶುದ್ಧೇಹಿ ಯತಸ್ವಗಂತುಮ್ ॥ ೧೧೬ ॥

**ಅರ್ಥ** :- ಈ ಅಧ್ಯಾಯದಲ್ಲಿ ವಿವರ್ಣಿಸಿರುವ ವಿಷಯವನ್ನು ಓದಿ, ಮತ್ತು ಪರರಿಗೆ ಓದಿ ಹೇಳಿ, (ಓದಿಸಿ) ಘೋರ ದುಃಖಕ್ಕೆ ಕಾರಣೀಭೂತವಾದ ಅಶುಭೋಪಯೋಗವನ್ನು ತ್ಯಜಿಸಿ; ಇಂದ್ರಿಯ ಜನ್ಯ ಸುಖಗಳಿಗೆ ಸಾಧನವಾದ ಶುಭೋಪಯೋಗದಲ್ಲಿ ಮನಸ್ಸನ್ನಿಟ್ಟು ಮತ್ತು ಅಂತ್ಯದಲ್ಲಿ ಶುದ್ಧೋಪಯೋಗದ ಪ್ರಾಪ್ತಿಗಾಗಿ ಯತ್ನಿಸಬೇಕು.

**ಭಾವಾರ್ಥ** :- ಈ ಅಧ್ಯಾಯದಲ್ಲಿ, ಪಾಪಕಾರ್ಯಗಳನ್ನು ಮಾಡುವುದು ಅಶುಭೋಪಯೋಗವಾಗಿರುತ್ತದೆಂದು ಸಿದ್ಧವಾಯಿತು. ಅಶುಭೋಪಯೋಗದಿಂದ ಪಾಪ ಕರ್ಮಗಳ ಬಂಧವು. ಆದರಿಂದ ಪಾಪ ಕರ್ಮ ಪರಂಪರೆಯು ಬೆಳೆದು ನರಕಾದಿ ದುರ್ಗತಿ ದುಃಖವನ್ನನುಭವಿಸಬೇಕಾಗುತ್ತದೆ. ಆದ್ದರಿಂದ



ಭವ್ಯಾತ್ಮರು ಮೊತ್ತಮೊದಲು ಎಲ್ಲ ದುಃಖಗಳಿಗೆ ಕಾರಣವಾದ ಅಶುಭೋಪಯೋಗವನ್ನು ತ್ಯಜಿಸಬೇಕು. ಇದನ್ನು ತ್ಯಜಿಸಿದೆ ಆತ್ಮ ಕಲ್ಯಾಣವು ಸಾಧ್ಯವೇ ಇಲ್ಲ. ಆತ್ಮ ಕಲ್ಯಾಣದ ಮಾರ್ಗದಲ್ಲಿ ವರ್ತಿಸುವುದು ಪ್ರತಿಯೊಂದು ಜೀವದ ಪರಮ ಆವಶ್ಯಕವಾಗಿರುತ್ತದೆ. ಆದ್ದರಿಂದ ಅಶುಭೋಪಯೋಗವನ್ನು ಹೊಡೆದೋಡಿಸಿ ಶುಭೋಪಯೋಗವನ್ನು ಧಾರಣೆಮಾಡಬೇಕು. ಕ್ರಮೇಣ ಶುದ್ಧೋಪಯೋಗದ ಪ್ರಾಪ್ತಿಗಾಗಿ ಯತ್ನಿಸುವುದು. ಅದು ಶಾಶ್ವತ ಸುಖಕ್ಕೆ ಪ್ರಧಾನ ವಸ್ತುವಾಗಿರುತ್ತದೆಂಬುದನ್ನು ಮರೆಯಬಾರದು.

ಮುಂದಕ್ಕೆ ಅಶುಭೋಪಯೋಗ ಅಧ್ಯಾಯದ ಸಾರವನ್ನು ವಿಶದೀಕರಿಸುತ್ತಾರೆ.

ಮತಿಃಸ್ಯಾದ್ ಯಾದೃಶೀಯಸ್ಯ, ತಸ್ಯಸ್ಯಾತ್ತಾದೃಶೀಗತಿಃ ।
ಯದರ್ಥೇ ಯಸ್ಯಭಾವೋಽಸ್ತಿ ಪ್ರಾಯಸ್ತಲ್ಲಭತೇ ಹಿ ಸಃ ॥ ೧೧೭ ॥

**ಅರ್ಥ** :- ಮಾನವನ ಬುದ್ಧಿಯಂತೆ ಗತಿಯೂ ಕೂಡಾ ಆಗುವುದು. ಹಾಗೆಯೆ ಭಾವವು ಯಾವ ಪದಾರ್ಥದ ಪ್ರಾಪ್ತಿಗಾಗಿರುವುದೋ ಅದೇ ಪದಾರ್ಥದ ಪ್ರಾಪ್ತಿಯಾಗುವುದು.

**ಭಾವಾರ್ಥ** :- ಸಂಸಾರದಲ್ಲಿ ಜೀವಗಳ ಪರಿಣಾಮಕ್ಕನುಗುಣವಾಗಿ ಪುಣ್ಯ ಪಾಪಗಳ ಸಂಪಾದನೆಯಾಗುತ್ತವೆ. ಒಂದು ವೇಳೆ ವಿಪರೀತ ಬುದ್ಧಿಯಿದ್ದರೆ ಅಥವಾ ಪಾಪ ರೂಪವಾಗಿದ್ದರೆ ಸದಾ ಪಾಪಕರ್ಮಗಳ ಬಂಧವಾಗುತ್ತಿರುತ್ತದೆ. ಯಾವ ಜೀವಗಳ ಪರಿಣಾಮವು ಸರಳವೂ ಸತ್ಯವೂ ಆಗಿದ್ದರೆ ಆತ ಪಾಪದಿಂದ ರಕ್ಷಣೆ ಹೊಂದುತ್ತ ಪುಣ್ಯದತ್ತ ಮನಸ್ಸಾಗುವುದು. ಆದ್ದರಿಂದ ಆಚಾರ್ಯರು ಯಾವ ಜೀವನ ಪರಿಣಾಮವಿದ್ದಂತೆ ಗತಿಯೂ ಕೂಡಾ ಲಭಿಸುವುದು. ಇಲ್ಲಿ ಗತಿ ಶಬ್ದವು ಪುಣ್ಯಪಾಪವೆಂದು ತಿಳಿಯಬೇಕು ಅಥವಾ ಪುಣ್ಯದಿಂದ ಸ್ವರ್ಗಾದಿಗತಿಯು, ಪಾಪದಿಂದ ನರಕಗತಿಯು ಪ್ರಾಪ್ತಿಯಾಗುವುದೆಂದು ತಿಳಿಯಬೇಕು. ಮತ್ತೆ ಯಾವ ಮಾನವನ ಭಾವವು ಯಾವ ವಸ್ತುವಿನ ಪ್ರಾಪ್ತಿಗೋಸ್ಕರವಾಗಿರುವುದೋ ಅದು ಪ್ರಾಯಶಃ ಯತ್ನಿಸಿದರೆ ಸಿದ್ಧಿಸುವುದು. ಯಾವ ನರ ಶ್ರೇಷ್ಠನು ಮೋಕ್ಷಾಭಿಲಾಷೆಯಿಂದ

ಆದರ ಪ್ರಾಪ್ತಿಗಾಗಿ ಯತ್ನಿಸುತ್ತಿದ್ದರೆ ಹತ್ತೆಂಟುಭವಗಳಲ್ಲಿ ಆ ಸುಖದ ಪ್ರಾಪ್ತಿಯಾಗುವಾಗ ಸಂಸಾರಿಕ ಸುಖದ ಪ್ರಾಪ್ತಿಯಾಗುವುದರಲ್ಲಿ ವಿಶೇಷತೆಯೇನು ? ಅರ್ಥಾತ್ ಯತ್ನಿಸಿದರೆ ಸಂಸಾರ ಸಂಬಂಧ ಪದಾರ್ಥಗಳೂ ಕೂಡಾ ಲಭಿಸುವವೆಂದು ಧ್ವನಿತವಾಗುತ್ತದೆ. ಆದ್ದರಿಂದ ಭವ್ಯಾತ್ಮರು ಸದಾ ಕಾಲವು ಅವಿನಾಶೀ ಸುಖಕ್ಕಾಗಿ ಯತ್ನಿಸುತ್ತಿರಬೇಕು.

ಮುಂದಕ್ಕೆ ಚಿತ್ತವಿಕಾರಗಳ ಕಾರಣವನ್ನು ಹೇಳುತ್ತಾರೆ.

**ಪೂರ್ವಸಂಸ್ಕಾರ ತೋ ಭಾವೇ ದುಷ್ಟಾನಾಂ ಸಂಗದೋಷತಃ ।**
**ದುಷ್ಟತಾ ವಿಕೃತಿಶ್ಚಿತ್ತೇ ದುಃಖದಾ ಜಾಯತೇ ನೃಣಾಮ್ ॥ ೧೧೮ ॥**

**ಅರ್ಥ** :- ಪರರಿಗೆ ಪೀಡೆಯುಂಟಾಗುವಂತೆ ದುಷ್ಟ ಪರಿಣಾಮಗಳು ಪೂರ್ವಜನ್ಮದ ಸಂಸ್ಕಾರದಿಂದಲೇ ಉಂಟಾಗುವುದು. ಮತ್ತೆ ಯಾರ ಹೃದಯ ದಲ್ಲಿ ಪರಜೀವಿಗಳಿಗೆ ತೊಂದರೆಯುಂಟಾಗುವ ಭಾವಗಳು ದುರ್ಜನ ಸಂಗದಿಂದ ಸಾಧ್ಯವು.

**ಭಾವಾರ್ಥ** :- ಪೂರ್ವ ಜನ್ಮದ ಸಂಸ್ಕಾರದಂತೆ ಮುಂದಿನ ಭವದಲ್ಲಿ ಪರಿಣಾಮಗಳು ಪ್ರವರ್ತಿಸುತ್ತವೆ. ಯಾವ ಜೀವಗಳ ಪರಿಣಾಮಗಳು ಮೋಕ್ಷ ಮಾರ್ಗದಲ್ಲಿರುವುದೋ ಅವರು ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವರು. ತದ್ವಿರುದ್ಧವಾಗಿ ದುರ್ವ್ಯಸನಗಳಲ್ಲಾಗಲಿ, ಅನ್ಯ ಕುಮಾರ್ಗದಲ್ಲಾಗಲಿ, ಪ್ರವರ್ತಿಸಿದ್ದರೆ ಅದು ಪೂರ್ವ ಸಂಸ್ಕಾರ ನಿಮಿತ್ತವಾಗಿರುತ್ತವೆ. ಇದು ಪೂರ್ವ ಜನ್ಮದ ಸಂಸ್ಕಾರವೆಂದೇ ಸಿದ್ಧವಾಗುತ್ತದೆ. ಉದಾ:- ಕಮಠನ ಜೀವನು ದುರ್ವ್ಯಸನಗಳಲ್ಲಿ ಮುಳುಗಿದ್ದುದರಿಂದಲೇ ಆತನ ಸಂಸ್ಕಾರವು ಎಷ್ಟೋ ಜನ್ಮ ಗಳವರೆಗೆ ಬೆನ್ನಿನ್ನೆ ಬಿಡಲಿಲ್ಲವು. ಹಾಗೆಯೇ ಆತನ ಸಹೋದರ ಜೀವನು ಯಾವ ವಿಧ ದುರ್ವ್ಯಸನಗಳಲ್ಲಿಯೂ ಬೀಳದೆ ಮೋಕ್ಷಮಾರ್ಗದಲ್ಲಿ ಬುದ್ಧಿಯನ್ನಿಟ್ಟು ಕೊಂಡಿದ್ದರಿಂದ ಆತನಿಗೆ ಅಂತ್ಯದಲ್ಲಿ ಮೋಕ್ಷಪ್ರಾಪ್ತಿಯಾಯಿತು. ಆದ್ದರಿಂದ ಸಕಲ ಭವ್ಯಾತ್ಮರು ಪರಿಣಾಮವನ್ನು, ಕರ್ತವ್ಯವನ್ನು ಸದಾ ಪುಣ್ಯರೂಪ ಕಾರ್ಯದಲ್ಲಿ ಮತ್ತು ಮೋಕ್ಷಮಾರ್ಗದಲ್ಲಿ ಸ್ಥಿರಪಡಿಸತಕ್ಕದ್ದು. ಮತ್ತೆ ದುರ್ವ್ಯಸನಗಳಿಂದಲೂ, ದುರ್ಜನ ಸಂಗತಿಯಿಂದಲೂ ರಕ್ಷಣೆಪಡೆದು



ನರಕಾದಿ ದುರ್ಗತಿಗಳಿಂದಲೂ ದೂರವಿರುವುದೇ ಆತ್ಮಕಲ್ಯಾಣದ ಸುಲಭ ಮಾರ್ಗವು.

ಮುಂದಕ್ಕೆ ಈ ಅಧ್ಯಾಯದ ಉಪಸಂಹಾರ ಮಾಡುತ್ತಾರೆ.

**ತದನುಸಾರತೋಗ್ರಂಥ ವರ್ಣಿತಂ ಹ್ಯಶುಭಂ ಫಲಮ್ ।**
**ಕಸ್ಯಾಪಿ ನಿಂದನಾರ್ಥಂ ನನ ತಿರಸ್ಕಾರ ಹೇತವೇ ॥ ೧೧೯ ॥**

**ಸರ್ವ ಪ್ರಾಣಿ ಹಿತಾರ್ಥಂಹಿ ಶುದ್ಧಚಿದ್ರೂಪ ಮೂರ್ತಿನಾ ।**
**ಧೀಮತಾ ಸ್ವಾತ್ಮತುಷ್ಟೇನ ಕುಂಥು ಸಾಗರ ಸೂರಿಣಾ ॥ ೧೨೦ ॥**

**ಅರ್ಥ** :- ಪರಿಶುದ್ಧ ಚೈತನ್ಯ ಮೂರ್ತಿಯು, ಜ್ಞಾನ ಸ್ವರೂಪಿಯೂ ಆದ ತನ್ನಾತ್ಮನಲ್ಲಿ ಸಂತುಷ್ಟನಾಗಿರುವ ಆಚಾರ್ಯ ಶ್ರೀ ಕುಂಥುಸಾಗರ ಮುನಿಗಳಿಂದ ಅಶುಭೋಪಯೋಗದ ಅಶುಭ ಫಲವು ವರ್ಣಿಸಿರುತ್ತದೆ. ಯಾರನ್ನು ನಿಂದಿಸುವುದಕ್ಕಾಗಲಿ, ತಿರಸ್ಕರಿಸುವುದಕ್ಕಾಗಲಿ ಅಲ್ಲ. ಕಿಂತು ಸಕಲ ಜೀವಗಳ ಕ್ಷೇಮಕ್ಕೋಸ್ಕರವಾಗಿ ವರ್ಣಿಸಲ್ಪಟ್ಟಿರುತ್ತದೆ.

**ಭಾವಾರ್ಥ** :- ಈ ಗ್ರಂಥವನ್ನು ಶ್ರದ್ಧೆಯಿಟ್ಟು ಓದಿ, ಕೇಳಿ ಅಶು ಭೋಪಯೋಗವನ್ನು ತ್ಯಜಿಸಿ, ಹಿತಕಾರಕ ಶುಭೋಪಯೋಗವನ್ನು ಧಾರಣೆ ಮಾಡಬೇಕು. ಮತ್ತು ಮೋಕ್ಷ ಮಾರ್ಗದಲ್ಲುದ್ಯುಕ್ತರಾಗಬೇಕೆಂಬ ಸದುದ್ದೇಶ ದಿಂದಲೇ ರಚಿಸಲ್ಪಟ್ಟಿರುತ್ತದೆ.

**ಇತಿ ಆಚಾರ್ಯವರ್ಯ ಶ್ರೀ ಕುಂಥುಸಾಗರ ವಿರಚಿತ ಭಾವತ್ರಯ ಫಲ ಪ್ರದರ್ಶೀನಾಮ್ನಿ ಗ್ರಂಥೇ ಅಶುಭೋಪಯೋಗ ಫಲ ವರ್ಣನಂ ನಾಮ ಪ್ರಥಮೋ ಅಧ್ಯಾಯಃ**

ಈ ಪ್ರಕಾರವಾಗಿ ಆಚಾರ್ಯವರ್ಯ ಶ್ರೀ ಕುಂಥುಸಾಗರ ವಿರಚಿತ ''ಭಾವತ್ರಯ ಫಲ ಪ್ರದರ್ಶೀ'' ಗ್ರಂಥವು "ಧರ್ಮರತ್ನ" ಪಂಡಿತ ಲಾಲಾ ರಾಮಶಾಸ್ತ್ರಿಗಳ ಹಿಂದೀ ಟೀಕೆಯಿಂದ ಸಿದ್ಧಾಂತಾಚಾರ್ಯ ಶ್ರೀಕಾಂತಶಾಸ್ತ್ರಿಗಳ ಸರಳ ಕನ್ನಡ ಭಾಷಾನುವಾದಯುಕ್ತ ಅಶುಭೋಪಯೋಗ ಫಲವನ್ನು ವಿವರಿಸಿರುವ ಪ್ರಥಮ ಅಧ್ಯಾಯವು ಸಮಾಪ್ತ.

# ಎರಡನೆಯ ಅಧ್ಯಾಯ

ಶುಭೋಪಯೋಗ ಫಲ ವರ್ಣನೆ :-

ಸುಖಪ್ರದಂ ದುಃಖಹರಂ ಕಿಲೇಷ್ಟಂ ।
ನತ್ವಾಮುದಾ ಪಂಚಗುರುಂ ಯಥಾವತ್ ॥
ಶುಭೋಪಯೋಗಸ್ಯ ಫಲಸ್ವರೂಪಂ ।
ಸರ್ವಾತ್ಮಶಾಂತ್ಯೈ ಕಥಯಾಮಿ ಭಕ್ತ್ಯಾ ॥ ೧೨೧ ॥

ಅರ್ಥ :- ಈಗ ಸಕಲ ಜೀವಗಳಿಗೆ ಸುಖವನ್ನುಂಟುಮಾಡುವುದು, ದುಃಖ ಪರಂಪರೆಯನ್ನು ನಾಶಮಾಡುವ ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧುಗಳಾದ ಪಂಚಪರಮೇಷ್ಠಿಗಳನ್ನು ಭಕ್ತಿಭಾವದಿಂದ ವಂದಿಸಿ ಸರ್ವ ಜೀವಗಳಿಗೆ ಸುಖ ಶಾಂತಿಯನ್ನುಂಟುಮಾಡುವ ಶುಭೋಪಯೋಗದ ಫಲವನ್ನು ನಿರೂಪಿಸುತ್ತೇನೆ.

ಮುಂದಕ್ಕೆ ಸತ್ಪುತ್ರಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ಸುಪುತ್ರ ಲಾಭಾಃ ।
ಭವಂತಿ ನೃಣಾಂ ವದ ದೇವ ! ಲೋಕೇ ॥

ಅರ್ಥ :- ಹೇ ದೇವಾಧಿದೇವನೇ ! ಕೃಪೆಮಾಡಿ ಎಂತಹ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಈ ಲೋಕದಲ್ಲಿ ಸತ್ಪುತ್ರರ ಪ್ರಾಪ್ತಿಯಾಗುವುದೆಂಬುದನ್ನು ವಿವರಿಸಿರಿ.

ಉತ್ತರ :- ಕುಮಾರ್ಗಲಗ್ನಾನ್ ಹಿ ಪರಸ್ಯ ಪುತ್ರಾನ್ ।
ಯುಕ್ತ್ಯಾ ವಿಭೋಧ್ಯೈವ ಪುರಾ ಸುಮಾರ್ಗೇ ॥
ಸೇವಾದೀ ಕಾರ್ಯೇ ಹ್ಯಯುನಕ್ ಸುಸಾಧೋ ।
ರ್ಮಾತುಃ ಸಭವ್ಯೋ ಲಭತೇ ಸುಪುತ್ರಾನ್ ॥ ೧೨೨ ॥

ಅರ್ಥ :- ಯಾವ ಮನುಷ್ಯನು ಪೂರ್ವ ಜನ್ಮದಲ್ಲಿ ಕುಮಾರ್ಗದಲ್ಲಿ ನಡೆಯುತ್ತಿದ್ದ ಎರಡನೆಯವರ ಮಕ್ಕಳನ್ನು ಯುಕ್ತಿ ಪೂರ್ವಕ ಬುದ್ಧಿವಾದ ಹೇಳಿ



ಸನ್ಮಾರ್ಗದಲ್ಲಿಯು, ಸಜ್ಜನ ಸೇವೆಯಲ್ಲಿಯು ಮತ್ತು ತಂದೆ ತಾಯಿಗಳಲ್ಲಿ ಭಕ್ತಿ ವಿನಯಾದಿ ಕಾರ್ಯದಲ್ಲಿ ಪ್ರವರ್ತಿಸುವಂತೆ ಪ್ರಯತ್ನಿಸುವ ಭವ್ಯಾತ್ಮರು ಮುಂದಿನ ಭವದಲ್ಲಿ ಉತ್ತಮ ಗುಣ ಶಾಲಿಯಾದ ಮಕ್ಕಳನ್ನೆ ಪಡೆಯುವರು.

ಭಾವಾರ್ಥ :- ಪರರ ಮಕ್ಕಳಿಗೆ ಧಾರ್ಮಿಕ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವುದು, ಧರ್ಮಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವುದು, ಆತ್ಮಕಲ್ಯಾಣದ ಬೋಧೆಯನ್ನೀಯುವುದು ಇವೆಲ್ಲವು ಪುಣ್ಯಕಾರ್ಯಗಳಾಗಿವೆ. ಬಾಲ್ಯ ಕಾಲದಲ್ಲಿ ಧಾರ್ಮಿಕ ಶಿಕ್ಷಣ ಸುಸಂಸ್ಕಾರದಲ್ಲಿರುವ ಬಾಲಕರು ಧರ್ಮ ಮಾರ್ಗದಿಂದ ಚ್ಯುತರಾಗುವುದಿಲ್ಲವು. ಆದ್ದರಿಂದ ಜ್ಞಾನಿಗಳು ಮೊತ್ತಮೊದಲು ಬಾಲಕರಿಗೆ ಧಾರ್ಮಿಕ ಶಾಸ್ತ್ರಗಳನ್ನು ಓದಿಸಬೇಕೆಂದು ಆಜ್ಞೆಯಿತ್ತಿರುವರು. ಯಾವ ಗೃಹಸ್ಥರು ತಮ್ಮ ಮತ್ತು ಪರರ ಮಕ್ಕಳಿಗೆ ಧಾರ್ಮಿಕ ವಿದ್ಯಾಭ್ಯಾಸ ಮಾಡಿಸುತ್ತ ಕುಮಾರ್ಗದಲ್ಲಿ ಹೋಗದಂತೆ ತಡೆಯುವುದು, ಧಾರ್ಮಿಕ ಕ್ರಿಯೆಗಳಲ್ಲಿ ನೆಲೆನಿಲ್ಲುವಂತೆ ಪ್ರಯತ್ನಿಸುವರೋ ಅವರು ಮುಂದಿನ ಭವದಲ್ಲಿ ಉತ್ತಮ ಗುಣಶಾಲಿಗಳಾದ ಮಕ್ಕಳನ್ನೆ ಪಡೆಯುವರು.

ಮುಂದಕ್ಕೆ ಧಾರ್ಮಿಕ ಯೋಗ್ಯನಾದ ಗಂಡನು ಪ್ರಾಪ್ತವಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಧರ್ಮಾನು ಕೂಲಂ ಲಭತೇ ಪತಿಂಸ್ತ್ರೀಃ ॥

ಅರ್ಥ :- ಹೇ ದೇವನೇ ! ಕೃಪೆಮಾಡಿ ಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರಿಂದ ಸ್ತ್ರೀಯರಿಗೆ ಧರ್ಮಾನುಕೂಲರಾದ ಪತಿಯ ಪ್ರಾಪ್ತಿಯಾಗುವುದೆಂಬುದನ್ನು ವಿವರಿಸಬೇಕು.

ಉತ್ತರ :- ದಾನಾದಿಧರ್ಮೇ ಸತತಂ ನಿಮಗ್ನಂ ।
ಪುರಾಭವೇ ಯಾ ಪುರುಷಂ ವಿಲೋಕ್ಯಂ ॥
ತುಷ್ಯೇದ್ ದಯಾದ್ರಾ ಖಿಲ ದೀನನಾಥಂ ।
ಶ್ರೇಷ್ಠಂಪತಿಂ ಸಾ ಲಭತೇ ಗುಣಜ್ಞಮ್ ॥ ೧೨೩ ॥

ಅರ್ಥ :- ಯಾವ ದಯಾಶೀಲಳಾದ ಸ್ತ್ರೀಯು, ಪೂರ್ವ ಜನ್ಮದಲ್ಲಿ ದೇವಪೂಜೆ, ಪಾತ್ರದಾನಾದಿ ಧಾರ್ಮಿಕ ಕೆಲಸಗಳಲ್ಲಿ ತತ್ಪರನಾಗಿದ್ದ ಪುರುಷನನ್ನು ಕಂಡು ಆನಂದಭರಿತಳಾಗಿದ್ದಳೋ, ಅವಳು ಮುಂದಿನ ಭವದಲ್ಲಿ ಅನೇಕ ದೀನರನ್ನು ರಕ್ಷಿಸುವ ಸದ್ಗುಣಿಯಾದ ಪತಿಯನ್ನೇ ಪಡೆಯುವಳು.

ಭಾವಾರ್ಥ :- ಹೃದಯದಲ್ಲಿ ಧಾರ್ಮಿಕ ಪ್ರೇಮವು ನೆಲೆಸಿರುವವರು ಧರ್ಮಾತ್ಮರನ್ನು ಕಂಡು ಪ್ರಸನ್ನರಾಗುತ್ತಾರೆ. ಇದು ವಾತ್ಸಲ್ಯಗುಣವಾಗಿರುತ್ತದೆ. ಸಮ್ಯಗ್ದರ್ಶನದ ಅಂಗವೂ ಆಗಿರುತ್ತದೆ. ಆದ್ದರಿಂದ ಸಮ್ಯಗ್ದೃಷ್ಟೀ ಜೀವಗಳ ಧರ್ಮಿಷ್ಠರನ್ನು ನೋಡಿ ಪ್ರಫುಲ್ಲಿತರಾಗುವುದೆಂದು ಸಿದ್ಧವಾಗುತ್ತದೆ. ಅಂತಹ ಸಮ್ಯಗ್ದರ್ಶನವನ್ನು ಧರಿಸಿರುವ ಸ್ತ್ರೀಯು ವೀತರಾಗ ನಿರ್ಗ್ರಂಥ ಗುರುಗಳ ದರ್ಶನದಿಂದ ಸಂತುಷ್ಟಳಾಗುವಳು. ದೇವಪೂಜೆ, ಸತ್ಪಾತ್ರದಾನಗೈಯುವುದು ತನ್ನ ಪರಮ ಕರ್ತವ್ಯವೆಂದು ಭಾವಿಸಿ ಧರ್ಮದ ರಕ್ಷಣೆಗಾಗಿ, ಧರ್ಮಾತ್ಮರಿಗೆ ನಾನಾ ಮುಖವಾಗಿ ಸಹಾಯ ಮಾಡುವ ಭಾವನೆಯುಳ್ಳ ಸ್ತ್ರೀ ಪರಲೋಕದಲ್ಲಿ ಸದ್ಗುಣ ಸಂಪನ್ನನಾದ ಗಂಡನನ್ನೆ ಪಡೆಯುವಳು.

ಮುಂದಕ್ಕೆ ಸತ್ಪುತ್ರಿಯ ಪ್ರಾಪ್ತಿಗೆ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಲಾಭಃ ಸುತಾಯಾಃ ಭವತಿ ಹ್ಯಮುತ್ರೇ ॥

ಅರ್ಥ :- ಹೇ ಕರುಣಾನಿಧೇ ! ಎಂಥಹ ಪುಣ್ಯಕರ್ಮದ ಉದಯದಿಂದ ಪರಲೋಕದಲ್ಲಿ ಉತ್ತಮ ಪುತ್ರಿಯನ್ನು ಪಡೆಯುವನೆಂಬುದನ್ನು ಹೇಳಬೇಕು.

ಉತ್ತರ :- ದಾನಾರ್ಚನಾದೌ ಚ ಸದಾ ನಿಮಗ್ನಾಂ ।
ಪುತ್ರೀಂ ಸುಶೀಲಾಂ ಚ ಪರಸ್ಯ ದೃಷ್ಟ್ವಾ ॥
ಯೋಽಪ್ರಣಯಚ್ಛಿಕ್ಷಣ ದತ್ತಚಿತ್ತಾಂ ।
ಸೀತಾಸಮಾನಾಂ ಲಭತೇ ಸ ಪುತ್ರೀಮ್ ॥ ೧೨೪ ॥

ಅರ್ಥ :- ದಾನಾಪೂಜಾದಿ ಉತ್ತಮ ಕಾರ್ಯಗಳಲ್ಲಿ ತನ್ಮಯಳು, ಸುಶೀಲಳು, ಓದುಬರಹದಲ್ಲಿ ದೃಢಮನಸ್ಕಳಾದ, ಪರರ ಹೆಣ್ಣುಮಕ್ಕಳನ್ನು



ಕಂಡು ಸಂತೋಷಪಡುವ ಮಾನವನು ಮರಣಾನಂತರ ಪರಲೋಕದಲ್ಲಿ ಸೀತಾದೇವಿಯೋಪಾದಿಯಲ್ಲಿರುವ ಗುಣಾಢ್ಯಳಾದ ಸತ್ಪುತ್ರಿಯನ್ನು ಪಡೆಯುವನು.

ಭಾವಾರ್ಥ :- ಯಾವ ಪ್ರಕಾರವಾಗಿ ಜನಕ ಮಹಾರಾಜನಿಗೆ ಮಹಾ ಪತಿವ್ರತಾಶಿರೋಮಣಿಯು, ಪತಿಭಕ್ತಿಪರಾಯಣಳು, ಅಜರಾಮರವಾದ ಕೀರ್ತಿ ಯುಳ್ಳ ಸೀತಾದೇವಿಯೆಂಬ ಮಗಳು ಜನಿಸಿದ್ದಳು. ಇಂತಹ ಹೆಣ್ಣು ಮಗಳು ಹುಟ್ಟುವುದು ಮಹಾ ಭಾಗ್ಯೋದಯದಿಂದ ಸಾಧ್ಯವು. ಯಾವ ಹೆಣ್ಣು ಮಗಳು ಪ್ರತಿನಿತ್ಯವು ಅರಹಂತದೇವರ ಪೂಜೆಯನ್ನು ಮಾಡುತ್ತಿರುತ್ತಾಳೆಯೋ, ಸತ್ಪಾತ್ರಗಳಿಗೆ ದಾನವನ್ನೀಯುವಳೋ, ವ್ರತನಿಯಾಮಾದಿ ಸಂಯಮಗಳನ್ನು ಪಾಲಿಸಿಕೊಂಡಿರುವಳೋ ಮತ್ತು ಶಾಸ್ತ್ರಗ್ರಂಥಗಳ ಸ್ವಾಧ್ಯಾಯದಲ್ಲಿ ಸಮಯ ವನ್ನು ಕಳೆಯುತ್ತ ಕುತ್ಸಿತ ನಾಟಕ, ಉಪನ್ಯಾಸ, ಕಾವ್ಯ , ಕಥಾದಿ ಪುಸ್ತಕಗಳನ್ನು ಓದದೆ ಮಹಾ ಪುಣ್ಯಪುರುಷರ, ಮೋಕ್ಷಗಾಮಿಗಳ ಮತ್ತು ಮಹಾ ಮುನಿಗಳ ಕಥೆಗಳನ್ನು ಓದಿಕೊಂಡಿರುವ ಹೆಣ್ಣುಮಕ್ಕಳು ತನ್ನ ಆಯುಷ್ಯವನ್ನು ಪೂರ್ಣ ಗೊಳಿಸಿ ಪರಲೋಕದಲ್ಲಿ ಸೀತಾದೇವಿಗೆ ಸಮಾನಳಾದ ಪುತ್ರಿಯಾಗಿ ಜನಿಸು ವಳು. ಇಂತಹ ಸತಿಶಿರೋಮಣಿಗಳನ್ನು ಕಂಡು ಯಾವ ಪುರುಷನು ಆನಂದ ವಿಭೋರ(ತಲ್ಲೀನ)ನಾಗುತ್ತಾನೆಯೋ ಅಂತಹ ಮಾನವನು ಪರಲೋಕದಲ್ಲಿ ಸದ್ಗುಣವತಿಯಾದ ಪುತ್ರಿಯನ್ನೇ ಪಡೆಯುವನು.

ಮುಂದಕ್ಕೆ ಉತ್ತಮ ಪತ್ನಿಯ ಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ನರಃ ಸುಭಾರ್ಯಾ ಲಭತೇ ಮನೋಜ್ಞಾಮ್ ॥

ಅರ್ಥ :- ಹೇ ಭಗವಾನ್ ! ಯಾವ ಯಾವ ಪುಣ್ಯ ಕಾರ್ಯಗಳನ್ನು ಮಾಡಿರುವ ಫಲದಿಂದ ಈ ಮಾನವನಿಗೆ ಉತ್ತಮ ಗುಣವತಿಯಾದ ಪತ್ನಿಯು ಪ್ರಾಪ್ತಿಯಾಗುವುದೆಂಬುದನ್ನು ದಯವಿಟ್ಟು ವರ್ಣಿಸಬೇಕು.

ಉತ್ತರ :- ಕೃತ್ವಾಪುರಾ ಶೀಲವತಿಪ್ರಶಂಸಾಮ್ ।
ದಾನಾರ್ಚನಾದೌ ಸುಖದೇ ಸುಲಗ್ನಾಮ್ ॥

ದೃಷ್ಟ್ವಾ ಹೃತುಷ್ಯದ್ವಿನಯಾನ್ವಿತಾಂ ಸ್ತ್ರೀಮ್ ।
ಶ್ರೇಷ್ಠಾಂಸ ಭವ್ಯೋ ಲಭತೇ ಸುಶೀಲಾಮ್ ॥ ೧೨೫ ॥

ಅರ್ಥ :- ಪೂರ್ವ ಜನ್ಮದಲ್ಲಿ ಶೀಲವತಿಯರಾದ ಸ್ತ್ರೀಯರ ಪ್ರಶಂಸೆಯನ್ನು ಸದಾಕಾಲ ದೇವಪೂಜೆ, ದಾನಾದಿ ಸತ್ಕಾರ್ಯಗಳಲ್ಲಿ ಕಾಲಾಹರಣಗೈಯುವ ವಿನೀತಳಾದ ಸ್ತ್ರೀ ರತ್ನಗಳನ್ನು ಕಂಡು ಹೃದಯಾನಂದ ಸಾಗರದಲ್ಲಿ ಮುಳುಗಿದ್ದ ಮಹಾಭವ್ಯಪುರುಷರಿಗೆ ಸುಶೀಲರಾದ ಪತ್ನಿಯರ ಲಭ್ಯವಾಗುವುದು.

ಭಾವಾರ್ಥ :- ಶೀಲವತಿಯ ಪ್ರಶಂಸೆ, ಅವರ ದರ್ಶನ, ಅವರ ಕೀರ್ತಿಯನ್ನು ಪ್ರಚಾರ ಮಾಡುವುದು ಇವೇ ಮೊದಲಾದ ಗುಣಗಳನ್ನು ಹೊಗಳುವುದರಿಂದ ಅವರಲ್ಲಿ ಮತ್ತಷ್ಟು ದೃಢ ಭಾವನೆಯುಂಟಾಗುವುದು. ಇಲ್ಲಿ ವಿಶೇಷವಾಗಿ ಅವರ ಗುಣಗಳನ್ನು ವಿಚಾರಿಸುವ ಮಾನವನ ಶೀಲಾದಿ ಗುಣಗಳು ಸ್ವಯಂ ಪರಿಪುಷ್ಟವಾಗುತ್ತವೆ. ಇದೇ ಪ್ರಕಾರವಾಗಿ ಅವನು ಧಾರ್ಮಿಕ ಕ್ರಿಯೆಗಳಲ್ಲಿ ತತ್ಪರಳು, ಪತಿ ಭಕ್ತಿ ಪರಾಯಣಳಾದ, ಸ್ತ್ರೀಯನ್ನು ನೋಡಿ ಸಂತುಷ್ಟನಾಗುತ್ತಾನೆ. ಸ್ವಯಂಶೀಲ ವ್ರತಾದಿ ಧರ್ಮವನ್ನು ಪಾಲಿಸದವನು ಕುಶೀಲ ಪುರುಷನು. ಅತನು ಕುಶೀಲ ಸ್ತ್ರೀಯರನ್ನು ಕಂಡು ಸಂತೋಷಪಡುವವನಲ್ಲದೆ, ಶೀಲವತಿಯರನ್ನು ಕಂಡು ದ್ವೇಷ ಅಸೂಯೆಯನ್ನು ಪಡುತ್ತಿರುತ್ತಾನೆ. ಶೀಲವಂತರು ಶೀಲವತಿಯರನ್ನೇ ಪ್ರಶಂಸಿಸುವುದು ಎಂದು ಸಿದ್ಧವಾಗುತ್ತದೆ. ಅಂತಹ ಶೀಲವಂತಭವ್ಯಾತ್ಮರು ಪರಲೋಕದಲ್ಲಿ ಜನಿಸಿದರು, ಅಲ್ಲಿ ಸದ್ಗುಣ ಶಿರೋಮಣಿಯಾದ ಶ್ರೇಷ್ಠ ಪತ್ನಿಯನ್ನೆ ಪಡೆಯುವರು ಇದರಲ್ಲಿ ಸಂದೇಹವಿಲ್ಲವು.

ಮುಂದಕ್ಕೆ ಕೀರ್ತಿವಂತನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸುಕೀರ್ತಿ ಯುಕ್ತೋ ಭವತೀಹ ಜೀವಃ ॥

ಅರ್ಥ :- ಹೇ ದಯಾ ಮೂರ್ತಿಯಾದ ಭಗವಂತನೆ ! ಎಂಥಹ ಪುಣ್ಯ ಕಾರ್ಯಗಳನ್ನು ಮಾಡಿರುವ ಸತ್ಫಲವಾಗಿ ಈ ಜೀವನು ಸಂಸಾರದಲ್ಲಿ ಕೀರ್ತಿಶಾಲಿಯಾಗುವನೆಂಬುದನ್ನು ಹೇಳಬೇಕು.



ಉತ್ತರ :- ತೀರ್ಥಂಕರಾಣಾಂ ಗುಣಕೀರ್ತನಾದ್ವಾ ।
ಸುಧಾರ್ಮಿಕಾಣಾಂ ಗುರುಸೇವಯಾ ವಾ ॥
ಸನ್ಮಾನ ಸತ್ಕಾರ ವಿಧೇರ್ವಿಶೇಷಾತ್ ।
ಜೀವೋ ಯಶಸ್ವೀ ಭವತೀಹ ವಿಶ್ವೇ ॥ ೧೨೬ ॥

ಅರ್ಥ :- ತೀರ್ಥಂಕರ ಪರಮ ದೇವರ ಗುಣ ಕೀರ್ತನೆ, ಧರ್ಮಾತ್ಮರ ಆದರ ಸತ್ಕಾರ ಮತ್ತು ವೀತರಾಗ ನಿರ್ಗ್ರಂಥ ಗುರುಗಳ ಸೇವೆಯನ್ನು ಮಾಡುವ ನರನು ಸಂಸಾರದಲ್ಲಿ ಸತ್ಕೀರ್ತಿವಂತನಾಗಿಯೆ ಜನಿಸುವನು.

ಭಾವಾರ್ಥ :- ಪ್ರಪಂಚದಲ್ಲಿ ಕೀರ್ತಿವಂತನಾಗುವುದು ಮಹಾ ಪುಣ್ಯ ಕರ್ಮದ ಉದಯದಿಂದ. ಇಂತಹ ಸತ್ಫಲವು ಸಿಕ್ಕಬೇಕಾದರೆ ತೀರ್ಥಂಕರ ಪರಮ ದೇವರ ಗುಣ ಕೀರ್ತನೆ, ಸ್ತುತಿ, ಸ್ತೋತ್ರ, ಪೂಜಾಭಕ್ತಿಯಿಂದ ಪುಣ್ಯ ಕರ್ಮಗಳ ಬಂಧವು ಆಗುತ್ತದೆ. ತೀರ್ಥಂಕರ ಜೀವನು ಗರ್ಭಕ್ಕೆ ಬಂದು ಅವತರಿಸುವುದಕ್ಕೆ ಆರು ತಿಂಗಳು ಮೊದಲಿನಿಂದಲೇ ಇಂದ್ರನ ಆಜ್ಞೆಯ ಪ್ರಕಾರ ಕುಬೇರನು ಪ್ರತಿನಿತ್ಯವು ಮೂರು ಕಾಲಗಳಲ್ಲಿ ರತ್ನ ವೃಷ್ಟಿಯನ್ನು ಮಾಡುತ್ತಿರುತ್ತಾನೆ. ಆ ಸಮಯ ಮೊದಲುಗೊಂಡು ಸ್ವರ್ಗೀಯ ದೇವ ದೇವಿಯರು ಬಂದು ಜಿನ ಮಾತಾ ಪಿತೃಗಳ ಸೇವೆಯನ್ನು ಮಾಡಿಕೊಂಡಿರುತ್ತಾರೆ. ಜನನವಾದೊಡನೆ ಸೌಧರ್ಮೇಂದ್ರನು ತನ್ನ ಎಲ್ಲ ಪರಿವಾರ ವೈಭವದೊಡಗೂಡಿ ಬಂದು ಜಿನ ಬಾಲಕನನ್ನು ಮೇರು ಪರ್ವತಕ್ಕೆ ಐರಾವತ ಆನೆಯ ಮೇಲೆ ಕುಳ್ಳಿರಿಸಿಕೊಂಡು ಹೋಗಿ ಅಲ್ಲಿರುವ ಪಾಂಡುಕಶಿಲೆಯಲ್ಲಿ ಕುಳ್ಳಿರಿಸಿ ಕ್ಷೀರ ಸಮುದ್ರದ ಜಲದಿಂದ ಅಭಿಷೇಕ ಮಾಡುತ್ತಾರೆ. ಈ ಸನ್ನಿವೇಶವು ಎಷ್ಟು ಪುಣ್ಯ ಕರ್ಮದ ಪ್ರಭಾವದ ಮಹಿಮೆಯಾಗಿರುತ್ತದೆ.

ಲೌಕಾಂತಿಕ ದೇವತೆಗಳು ತಮ್ಮ ಸ್ಥಾನವನ್ನು ಬಿಟ್ಟು ಬರುವವರಲ್ಲ, ಆದರೆ ತೀರ್ಥಂಕರರಿಗೆ ವೈರಾಗ್ಯವುಂಟಾದೊಡನೆ ಅವರನ್ನು ತಮ್ಮ ಸ್ಥಾನದಿಂದ ಎಬ್ಬಿಸುವಂತೆ ಆಗ ಸ್ವಯಂ ಬಂದು ತೀರ್ಥಂಕರ ದೇವನನ್ನು ಸ್ತುತಿಸುತ್ತಾರೆ. ಮತ್ತು ಕೇವಲ ಜ್ಞಾನಭಾನುವು ಉದಯಿಸಿದೊಡನೆ ಸೌಧರ್ಮೇಂದ್ರನು ಬಂದು ಸಮವಸರಣ ಸಭೆಯನ್ನು ಕುಬೇರನಿಗೆ ರಚಿಸಲು ಆಜ್ಞೆಮಾಡುತ್ತಾನೆ.

ಅಲ್ಲಿ ಅಷ್ಟ ಮಹಾಪ್ರಾತಿಹಾರ್ಯಾದಿ ಮಹಾ ವಿಭೂತಿಗಳು ಉದ್ಭವಿಸುತ್ತವೆ. ಇವೆಲ್ಲವು ತೀರ್ಥಂಕರ ಮಹಾ ಪ್ರಭುವಿನ ಮಹಾ ಪುಣ್ಯಾತಿಶಯವಾಗಿರುತ್ತದೆ. ಅಂತಹ ಜ್ಞಾನಭಾನುವಿನ ಭಕ್ತಿ-ಸ್ತುತಿ ಗೈಯುವ ಮಾನವನು ನಿಶ್ಚಯವಾಗಿ ಸರ್ವತ್ರ ಯಶಸ್ವಿಯಾಗುತ್ತಾನೆ. ಇದೇ ಪ್ರಕಾರವಾಗಿ ವೀತರಾಗ ನಿರ್ಗ್ರಂಥ ಗುರುವರ್ಯರು ಮಹಾ ತಪಸ್ವಿಗಳು. ಅವರ ಸೇವೆಯನ್ನು ಕೂಡಾ ಇಂದ್ರಾದಿ ದೇವತೆಗಳು ಮಾಡಿ ಸತ್ಕೀರ್ತಿಗೆ ಪಾತ್ರರಾದರು. ಹಾಗೆಯೇ ಧರ್ಮಾತ್ಮರನ್ನು ಸತ್ಕರಿಸುವುದು, ಸೇವೆಗೈಯುವುದು ಇವೆಲ್ಲವು ಸಂಸಾರದಲ್ಲಿ ಕೀರ್ತಿ ಶಾಲಿಯಾಗಲು ಪ್ರಧಾನ ಕಾರಣಗಳಾಗಿವೆ. ಹೀಗೆ ಯಾವ ಪುರುಷನು ಮೇಲೆ ವಿವರಿಸಿರುವ ಕಾರ್ಯಗಳನ್ನು, ಶ್ರುತಭಕ್ತಿ, ಆಚಾರ್ಯ ಭಕ್ತಿ ಮತ್ತು ಧರ್ಮ ಪ್ರಭಾವನಾದಿ ಕಾರ್ಯಗಳನ್ನು ಮಾಡುವನೋ ಅವನ ಕೀರ್ತಿಲಹರಿಯು ಸಕಲ ಸಂಸಾರದಲ್ಲಿ ವ್ಯಾಪಿಸುತ್ತದೆ, ಸ್ಥಿರವಾಗಿರುತ್ತದೆ.

ಮುಂದಕ್ಕೆ ಸುಖೀಕುಟುಂಬದ ಪ್ರಾಪ್ತಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸುಖಪ್ರದಂ ನಾ ಲಭತೇ ಕುಟುಂಬಮ್ ॥

ಅರ್ಥ :- ಹೇ ಪ್ರಭುವೇ ! ಈ ಜೀವನು ಎಂಥ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಸುಖವನ್ನೀಯುವ ಕುಟುಂಬದಲ್ಲಿ ಜನಿಸುವ ನೆಂಬುದನ್ನು ವಿವರಿಸಬೇಕು.

ಉತ್ತರ :- ಯೋಯಸ್ಯ ಕಸ್ಯಾಪಿ ಕುಟುಂಬಿನಃ ಕೌ ।
ಕೃತ್ವಾಮಿಥೊ ವೈರ ವಿರೋಧ ಶಾಂತಿಮ್ ॥
ದತ್ವಾಧನಾದಿಂ ಸುಖಿನಂ ಚ ತುಷ್ಯೇತ್ ।
ಪ್ರಾಪ್ನೋತಿ ಯೋಗ್ಯಂ ಸುಖದಂ ಕುಟುಂಬಮ್ ॥ ೧೨೭ ॥

ಅರ್ಥ :- ಯಾವ ಮನುಷ್ಯಶ್ರೇಷ್ಠನು ಪರ ಕುಟುಂಬಾದಿಗಳಲ್ಲಿ ಉಂಟಾಗಿರುವ ವೈರ, ಕಲಹ, ಜಗಳಾದಿಗಳನ್ನು ಹೋಗಲಾಡಿಸಿ ಶಾಂತಿ ಸ್ಥಾಪನೆ ಮಾಡುವನೋ, ಆಪತ್ತಿನಲ್ಲಿ ಸಿಲುಕಿರುವ ಕುಟುಂಬಕ್ಕೆ ಧನ ಧಾನ್ಯಾದಿ ಸಹಾಯ



ವನ್ನಿತ್ತು ಕಷ್ಟಗಳನ್ನು ಪರಿಹರಿಸುವನೋ, ಮತ್ತು ಸುಖೀ ಕುಟುಂಬವನ್ನು ನೋಡಿ ಸಂತುಷ್ಟನಾಗುವವನು ಮರಣಾನಂತರ ಪರಲೋಕದಲ್ಲಿ ಜನಿಸಿ ಮಹಾಯೋಗ್ಯವು, ಸುಖಕರವಾದ ಕುಟುಂಬದಲ್ಲಿಯೇ ಜನಿಸಿ ಸುಖವನ್ನನು ಭವಿಸುವನು.

ಭಾವಾರ್ಥ :- ಜೀವನು ಸುಖಿಯಾಗಬೇಕಾದರೆ ಧರ್ಮಿಷ್ಠ ವಂಶದಲ್ಲಿ ಜನಿಸಬೇಕು. ಒಂದುವೇಳೆ ಸಂತಾನ, ಬಂಧುಬಾಂಧವರು, ಸ್ತ್ರೀಯು, ಇವರಲ್ಲಿ ಯಾರಾದರು ಅಯೋಗ್ಯರು, ಅಧರ್ಮಿಷ್ಠರಾಗಿದ್ದರೆ ಆ ಮನೆತನದ ವಾತಾವರಣವು ಅಶಾಂತಿ, ದುಃಖರೂಪವಾಗಿ ಪರಿಣಮಿಸುವುದು ಮಾತ್ರ ವಲ್ಲ ; ಧಾರ್ಮಿಕ ಕ್ರಿಯೆಗಳು ಕೂಡಾ ಮಾಯವಾಗುವವು. ಒಂದು ವೇಳೆ ಕುಟುಂಬದವರು ಯೋಗ್ಯರು, ಧರ್ಮಿಷ್ಠರಾಗಿದ್ದರೆ ಮನೆಯವರೆಲ್ಲ ಸುಖ-ಶಾಂತಿಯುಕ್ತರಾಗುತ್ತಾರೆ. ಆದ್ದರಿಂದ ಸುಖ, ಶಾಂತಿ, ಸಮಾಧಾನದ ವಂಶ ಪ್ರಾಪ್ತಿಯಾಗಬೇಕಾದರೆ ಮಹಾಪುಣ್ಯ ಲಕ್ಷ್ಮಿಯೇ ಬೇಕು. ಯಾರು ಪರರನ್ನು ಯೋಗ್ಯರನ್ನಾಗಿ ಮಾಡುವುದು, ಭಿನ್ನಾಭಿಪ್ರಾಯಗಳಿದ್ದರೆ ತನ್ನ ಬುದ್ಧಿ ಸಾಮರ್ಥ್ಯದಿಂದ ಸಮಾಧಾನ ಪಡಿಸುವುದು, ಧಾರ್ಮಿಕ ವಿದ್ಯಾಭ್ಯಾಸ ಮಾಡಿಸುವುದು. ಧನ ವಸ್ತ್ರಾದಿಗಳನ್ನಿತ್ತು ಸಂತೋಷಪಡಿಸುವವನು ಪರಲೋಕ ದಲ್ಲಿ ಮಾನವ ಪರ್ಯಾಯವನ್ನು ಪಡೆದು ಶ್ರೇಷ್ಠ ವಂಶದಲ್ಲಿ ಜನಿಸಿ ಸುಖಕ್ಕೆ ಭಾಗಿಯಾಗುತ್ತಾನೆ.

ಮುಂದಕ್ಕೆ ಸಂಯಮಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸುಸಂಯಮೀ ಕೌ ಭವತೀಹ ಜೀವಃ ॥

ಅರ್ಥ :- ಹೇ ಕರುಣಾನಿಧೇ ! ಈ ಜೀವನು ಯಾವ ಯಾವ ಪುಣ್ಯ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಸಂಯಮವನ್ನು ಧರಿಸುವನೆಂಬು ದನ್ನು ಹೇಳಬೇಕು.

ಉತ್ತರ :- ಯೋ ವಾಗತೋ ದೇವಗತೇಶ್ಚ ಮಾತುಃ ।
ಪಿತುಃ ಕೃತಾ ಭಕ್ತಿ ವಶಾತ್ಸುಸೇವಾ ॥

ಸತ್ಸಂಗತಿರ್ಯೇನ ಶಿವ ಪ್ರದಾ ಹಿ ।
ಸ ಸಂಯಮಿಾ ಸ್ಯಾದ್ ಗುಣದೋಷವೇದೀ ॥ ೧೨೮ ॥

ಅರ್ಥ :- ಯಾವ ಜೀವವು ದೇವಗತಿಯಿಂದ ಬಂದು ಮಾನವನಾಗಿ ಜನಿಸಿ ತನ್ನ ಮಾತಾಪಿತೃಗಳ ಸೇವೆ ಗೈದಿರುವನೋ, ಮೋಕ್ಷದಾಯಕ ಧರ್ಮಾತ್ಮರಾದ ಸಜ್ಜನ ಪುರುಷರ ಸಂಗತಿಯಲ್ಲಿದ್ದು ಹೇಯೋಪಾದೇಯ ಬುದ್ಧಿಯುಳ್ಳವನು ನಿಶ್ಚಯವಾಗಿ ಮಹಾ ಸಂಯಮಿಯಾಗುವನು.

ಭಾವಾರ್ಥ :- ಸಂಯಮಧಾರಣೆಯು ಮೋಕ್ಷ ಸುಖಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಅಂತಹ ಸಂಯಮವು ಮಹಾಪುಣ್ಯದ ಉದಯದಿಂದ ಲಭಿಸುವುದು. ಪಂಚೇಂದ್ರಿಯಗಳು ಮತ್ತು ಮನಸ್ಸನ್ನು ತನ್ನ ವಶದಲ್ಲಿಟ್ಟುಕೊಳ್ಳುವುದು ಇಂದ್ರಿಯ ಸಂಯಮವು ಮತ್ತು ಷಟ್ ಜೀವಗಳ ರಕ್ಷಣೆ ಮಾಡುವುದಕ್ಕೆ ಪ್ರಾಣಿಸಂಯಮವಾಗಿರುತ್ತದೆ. ಈ ಸಂಯಮವು ಸಜಾತಿಯಲ್ಲಿ ಜನಿಸಿದವರಿಗೇನೇ ಹಸ್ತಗತವಾಗುವುದು. ಇದು ಮಹಾಪುಣ್ಯದಿಂದಲೇ ಲಭಿಸುವುದು. ಅರಹಂತರಲ್ಲಿ ಭಕ್ತಿಯಿಂದಲೂ, ವೀತರಾಗ ನಿರ್ಗ್ರಂಥ ಮುನಿಗಳಿಗಿತ್ತ ದಾನದಿಂದಲೂ ನಿರ್ದೋಷವಾಗಿ ಶ್ರಾವಕವ್ರತವನ್ನು ಆಚರಿಸುವುದರಿಂದಲೂ ಅಂತ್ಯದಲ್ಲಿ ಮಹಾವ್ರತಿಯಾಗಿ ಘೋರ ತಪಸ್ಸನ್ನು ಆಚರಿಸಿದ್ದರಿಂದಲೂ ದೇವಗತಿಯು ಪ್ರಾಪ್ತಿಯಾಗುವದು. ಅಲ್ಲಿ ನಾನಾ ಸ್ವರ್ಗೀಯ ಸುಖವನ್ನು ಅನುಭವಿಸಿ, ಆಯುಷ್ಯವು ಪೂರ್ಣವಾದೊಡನೆ ಶ್ರೇಷ್ಠ ಮಾನವನಾಗಿ ಜನಿಸುತ್ತಾನೆ. ಆ ಮನುಷ್ಯ ಪರ್ಯಾಯದಿಂದ ಸಂಯಮವನ್ನು ಧಾರಣೆಮಾಡಿ ಮೋಕ್ಷವನ್ನು ಪಡೆಯುವನು. ಇಷ್ಟು ಮಾತ್ರವಲ್ಲ, ತಂದೆ-ತಾಯಿಗಳ, ಸದ್ಗುರುಗಳ, ಮತ್ತು ಧರ್ಮಾತ್ಮರ ಸೇವೆ, ಸಂಗತಿ ಗೈಯುವವನು ಕೂಡಾ ಶ್ರೇಷ್ಠ ಮನುಷ್ಯನಾಗಿ ಜನಿಸಿ ಸಂಯಮವನ್ನು ಧಾರಣೆ ಮಾಡುತ್ತಾನೆ.

ಮುಂದಕ್ಕೆ ಶೋಕ ರಹಿತನಾಗಿರಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಶೋಕೇನ ಮುಕ್ತಶ್ಚ ಸುಖೀ ಸ್ಯಾತ್ ॥



ಅರ್ಥ :- ಹೇ ಪರಮ ಗುರುವೇ ! ಈ ಜೀವನು ಯಾವ ಪುಣ್ಯ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಶೋಕ ರಹಿತನಾಗಿ ಸುಖಿಯಾಗುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಬಿಂಬ ಪ್ರತಿಷ್ಠಾಂ ಗುರುದೇವ ಸೇವಾಂ ।
ವಿಲೋಕ್ಯ ತುಷ್ಯೇಜ್ಜಿನ ಧರ್ಮವೃದ್ಧಿಂ ॥
ಧರ್ಮೋತ್ಸವಂ ಧಾರ್ಮಿಕ ಜೀವಲೋಕಾನ್ ।
ಸ ಶೋಕ ಮುಕ್ತಶ್ಚ ಸದಾಸುಖೀಸ್ಯಾತ್ ॥ ೧೨೯ ॥

ಅರ್ಥ :- ಯಾವ ಧರ್ಮಾತ್ಮನಾದ ಮನುಷ್ಯನು ಬಿಂಬಪ್ರತಿಷ್ಠಾದಿ ಕಾರ್ಯಗಳನ್ನು ದೇವ, ಧರ್ಮ, ಗುರು ಮೊದಲಾದವರ ಪೂಜಾ ಭಕ್ತಿ, ಸೇವೆಗಳನ್ನು ನೋಡಿ ಮತ್ತು ಜಿನ ಧರ್ಮಪ್ರಭಾವನೆ, ಧರ್ಮೋತ್ಸವಗಳನ್ನು ಕಂಡು ಆನಂದಭರಿತನಾಗುವ ಮಾನವನು ಪರಲೋಕದಲ್ಲಿ ಜನಿಸಿ ಶೋಕವಿಲ್ಲದ, ಸುಖ ಶಾಂತಿಯಿಂದ ಕಾಲವನ್ನೇ ಕಳೆಯುವನು.

ಭಾವಾರ್ಥ :- ದುಃಖ ಶೋಕಾದಿಗಳ ಪ್ರಾಪ್ತಿಯು ಪಾಪ ಕರ್ಮದ ಉದಯದಿಂದ ಆಗುವುದು. ಆ ಪಾಪ ಕರ್ಮಗಳು ನಾಶವಾಗಬೇಕಾದರೆ ಧಾರ್ಮಿಕ ಕಾರ್ಯಗಳನ್ನು ಮಾಡುವುದರಿಂದಲೇ ಸಾಧ್ಯವು. ತೀರ್ಥಂಕರ ಪರಮ ದೇವನ ಪೂಜೆಯಿಂದಲೂ, ಜಿನ ಬಿಂಬ ಪ್ರತಿಷ್ಠೆ ಮಾಡಿಸುವುದರಿಂದಲೂ, ಜಿನ ಮಂದಿರಗಳ ನಿರ್ಮಾಪಣೆಯಿಂದಲೂ, ಸ್ವಾಧ್ಯಾಯ ಶಾಲೆಗಳನ್ನು ಸ್ಥಾಪಿಸುವುದು ಇವೆಲ್ಲವು ಪಾಪ ಕರ್ಮಗಳ ನಾಶಕ್ಕೆ ಕಾರಣವಾಗಿ ಪುಣ್ಯ ಕರ್ಮಗಳ ಪ್ರಾಪ್ತಿಯ ನಿಮಿತ್ತವಾಗಿರುತ್ತವೆ. ಪಾಪ ಕರ್ಮಗಳು ನಾಶವಾಗುವುದರಿಂದ ಈ ಜೀವನು ಮರುಭವದಲ್ಲಿ ಮಾನವ ಜನ್ಮವನ್ನು ಪಡೆದು ಶೋಕ-ರಹಿತನಾಗುವನು ಮತ್ತು ಪುಣ್ಯ ಕರ್ಮದ ಉದಯದಿಂದ ಸದಾಕಾಲವು ಸುಖಿಯಾಗುವನು. ಇದೆಲ್ಲವನ್ನು ತಿಳಿದು ಭವ್ಯ ಜೀವಗಳು ತಮ್ಮ ಸಮಯವನ್ನು ಧರ್ಮಕಾರ್ಯಗಳಲ್ಲಿಯೇ ಕಳೆಯುತ್ತಿರಬೇಕು.

ಮುಂದಕ್ಕೆ ಈ ಜೀವನು ಅನೇಕ ಜೀವಗಳ ಸ್ವಾಮಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸ್ವಾಮೀ ಭವೇನ್ನಾ ಬಹುಜೀವಕಾನಾಂ ॥

ಅರ್ಥ :- ಹೇ ಪರಮ ಗುರುವೇ ! ಈ ಜೀವನು ಯಾವ ಯಾವ ಪುಣ್ಯ ಕಾರ್ಯಗಳನ್ನು ಮಾಡುವುದರಿಂದ ಅನೇಕ ಜೀವಗಳ ಅಧಿಪತಿಯಾಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ದೇವಸ್ಯ ಧರ್ಮಸ್ಯ ಗುರೋಶ್ಚಸೇವಾಂ ।
ಯೋ ಧಾರ್ಮಿಕಾಣಾಂ ವಿನಯಂ ಚ ಕೃತ್ವಾ ॥
ದೀನಾಯ ದತ್ವೈವ ಗೃಹಾನ್ನವಸ್ತ್ರಂ ।
ತುಷ್ಯೇತ್ಸ ಮೃತ್ವಾಬಹುಜೀವಕರ್ತಾ ॥ ೧೩೦ ॥

ಅರ್ಥ :- ದೇವ, ಶಾಸ್ತ್ರ, ಗುರು ಮತ್ತು ಧರ್ಮದ ಸೇವೆಗೈಯುವ, ಧರ್ಮಾತ್ಮರನ್ನು ಆದರ ಸತ್ಕಾರಮಾಡುವ, ವಿನಯಭಕ್ತಿಮಾಡುವ ಮತ್ತು ದೀನ, ಹೀನ ಧರ್ಮಾತ್ಮರಾದ ಧರ್ಮಬಂಧುಗಳಿಗೆ ಅನ್ನ, ವಸ್ತ್ರ ಮೊದಲಾದವುಗಳನ್ನು ಕೊಟ್ಟು ಆನಂದಪಟ್ಟಿರುವ ಮಾನವನು ಮರಣಾನಂತರ ಮಹಾಪುಣ್ಯಶಾಲಿಯಾಗಿ ಅನೇಕ ಜೀವಗಳ ಸ್ವಾಮಿ, ಅಧಿಪತಿಯಾಗಿ ಜನಿಸುವನು.

ಭಾವಾರ್ಥ :- ಈ ಜಗತ್ತಿನಲ್ಲಿ ರಾಜರು, ಮಹಾರಾಜರು ಮತ್ತು ದೊಡ್ಡ ದೊಡ್ಡ ಧನಪತಿಗಳು ಅನೇಕ ಜನರ ಸ್ವಾಮಿ ಮತ್ತು ಅಧಿಪತಿಗಳಾಗಿರುವುದು ಪುಣ್ಯಕರ್ಮಗಳ ಫಲವಾಗಿರುತ್ತದೆ. ಈ ಸಂಸಾರದಲ್ಲಿ ತೀರ್ಥಂಕರ ಪರಮದೇವರ ಭಕ್ತಿ, ದರ್ಶನದ ಸೌಭಾಗ್ಯವು ಪ್ರಾಪ್ತವಾಗುವುದು ಕೂಡಾ ಪುಣ್ಯದ ಫಲವೆ. ಯಾಕೆಂದರೆ ಭಗವಾನ್ ಸರ್ವಜ್ಞದೇವರು ಸರ್ವೋತ್ಕೃಷ್ಟರು ನಿರ್ದೋಷಿಗಳೂ, ಇಂದ್ರಾದಿವಂದ್ಯರೂ ಆಗಿರುತ್ತಾರೆ. ಯದ್ಯಪಿ ಅವರು ವೀತರಾಗಿಗಳಾಗಿದ್ದರೂ ಅವರ ಪರಿಶುದ್ಧ ಆತ್ಮಪ್ರಭಾವದಿಂದ ಸೇವಾಭಕ್ತಿ ಮಾಡುವವರ ಪರಿಣಾಮವು ಕೂಡಾ ಪರಿಶುದ್ಧವೇ ಆಗುತ್ತದೆ. ಶುದ್ಧ ಪರಿಣಾಮದಿಂದ ಪುಣ್ಯಕರ್ಮ ಬಂಧಮಾಡಿಕೊಳ್ಳುತ್ತಾನೆ. ಆ ಪುಣ್ಯ ಕರ್ಮವು ಉದಯಕ್ಕೆ ಬರುವಾಗ ಜೀವನು ರಾಜ-ಮಹಾರಾಜರಾಗಿ ಅನೇಕ ಜೀವಗಳ



ಸ್ವಾಮಿಯಾಗಿ ಶೋಭಿಸುತ್ತಾನೆ. ಹಾಗೆ ಅನೇಕ ಧರ್ಮಾತ್ಮ ಜೀವಗಳಿಗೆ ನಾನಾವಿಧವಾಗಿ ದಾನವಿತ್ತುದರ ಫಲದಿಂದಲು ಪರಲೋಕದಲ್ಲಿ ಜನ್ಮತಾಳಿ ಅನೇಕರಿಗೆ ಪ್ರಭುವಾಗುತ್ತಾನೆ. ಈ ವಿಷಯವನ್ನು ಪ್ರತಿಯೊಬ್ಬ ಭವ್ಯಾತ್ಮನು ಪ್ರತಿನಿತ್ಯವು ಅರಹಂತ ಪೂಜೆ, ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ ಮೊದಲಾದ ರತ್ನತ್ರಯಧಾರಕ ಭವ್ಯಜೀವಿಗಳಿಗೆ ಚತುರ್ವಿಧ ದಾನವನ್ನು ಮಾಡುತ್ತಿರಬೇಕು. ಈ ಸತ್ಪಾತ್ರದಾನವು ಅತುಲಸಂಪತ್ತಿಗೆ ಕಾರಣವಾಗಿರುವುದೆಂಬುದನ್ನು ಮರೆಯಬಾರದು.

ಮುಂದಕ್ಕೆ ನೀರೋಗ ಶರೀರಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ನೀರೋಗದೇಹಂ ಲಭತೇ ಮನುಷ್ಯ ಃ ॥

ಅರ್ಥ :- ಹೇ ಸ್ವಾಮಿನ್ ! ಈ ಜೀವನಿಗೆ ಯಾವ ಕಾರಣದಿಂದ ನೀರೋಗ ಶರೀರ ಪ್ರಾಪ್ತಿಯಾಗುವುದೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಸರೋಗಿ ಪಾತ್ರಾಯ ಕಿಲೌಷಧಾನ್ನಂ ।
ಭಕ್ತ್ಯಾ ಪ್ರದತ್ತಂ ವಿಮಲಾಸನಾದಿ ॥
ಸರೋಗಿನಃ ಸಾಧುಜನಸ್ಯ ಯೇನ ।
ಸೇವಾಕೃತಾ ಸ್ಯಾತ್ಸ ಸುಖೀಹ್ಯರೋಗೀ ॥ ೧೩೧ ॥

ಅರ್ಥ :- ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ ಈ ನಾಲ್ಕು ಪ್ರಕಾರ ಸಂಗದ ರೋಗಿಗಳಿಗೆ ಭಕ್ತಿ ಪೂರ್ವಕ ಆಹಾರ, ಔಷಧಿ ಮೊದಲಾದ ವಸ್ತುಗಳ ದಾನ ಮಾಡುವ ನಿರ್ಮಲವು ಪವಿತ್ರವಾದ ಆಸನಾದಿಗಳನ್ನು ಕೊಡುವ ಮತ್ತು ರೋಗಿಮುನಿಗಳ ಸೇವೆ, ಸುಶ್ರೂಷೆಗೈಯುವ ಮಾನವನು ತನ್ನ ಮರಣಾ ನಂತರ ಮರುಭವದಲ್ಲಿ ಜನಿಸಿ ನೀರೋಗ ಶರೀರವನ್ನು ಪಡೆದು ಸುಖ ಶಾಂತಿಯಿಂದ ಕಾಲಾಹರಣ ಮಾಡುವವನಾಗುತ್ತಾನೆ.

ಭಾವಾರ್ಥ :- ರೋಗಿಗಳ ರೋಗ ನಿವಾರಣಾರ್ಥವಾಗಿ ಔಷಧಿಯ ನ್ನೀಯುವುದು. ನೀರೋಗಿಯಾದವನೇ ಸುಖಿಯು, ರೋಗಪೀಡಿತ ಮುನಿ,

ಆರ್ಯಿಕ, ಶ್ರಾವಿಕೆಯರ ರೋಗನಿವಾರಣೆಗಾಗಿ ಔಷಧಿಕೊಟ್ಟು ರೋಗವಿಮುಕ್ತರನ್ನಾಗಿ ಮಾಡುವುದು ಮಹಾಪುಣ್ಯಕ್ಕೆ ಕಾರಣವಾಗುವುದು. ಅವರ ರತ್ನತ್ರಯ ವೃದ್ಧಿಯಾಗಿ ಆತ್ಮಕಲ್ಯಾಣ ಮಾಡಿಕೊಳ್ಳಲು ಸಾಧ್ಯವಾಗುವುದು. ಇಲ್ಲದ್ದಿದರೆ ಆತ್ಮಕಲ್ಯಾಣದಿಂದ ವಂಚಿತರಾಗುತ್ತಾರೆ. ಆದ್ದರಿಂದ ಔಷಧ ದಾನಮಾಡುವವನು ಅವರ ಆತ್ಮಕಲ್ಯಾಣದಲ್ಲಿ ಸಹಾಯಕನಾಗಿ ಪುಣ್ಯ ಸಂಪತ್ತಿಗೆ ಭಾಗಿಯಾಗುತ್ತಾನೆ. ಆ ಪುಣ್ಯವಿಶೇಷದಿಂದ ಮುಂದಿನ ಭವದಲ್ಲಿ ನಿರೋಗಿಯಾಗಿ ಜನಿಸಿ ನಾನಾ ಸುಖಗಳನ್ನು ಅನುಭವಿಸುವನು. ಆದ್ದರಿಂದ ಧನವಂತರು ತ್ಯಾಗೀರೋಗಿಗಳಿಗೆ ಔಷಧಿಯನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಿಸುವುದು ಆತ್ಮಕಲ್ಯಾಣಕ್ಕೆ ಭಾಗಿಯಾಗುತ್ತದೆ.

ಮುಂದಕ್ಕೆ ನೀತಿವಂತ, ಬುದ್ಧಿವಂತನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ನೀತ್ಯಾ ಬಲಿಷ್ಠೋ ಭವತೀಹ ಜೀವಃ ।

ಅರ್ಥ :- ಹೇ ದೇವಾದಿದೇವನೇ ! ಈ ಜೀವನು ಯಾವ ಪುಣ್ಯ ಕಾರ್ಯಗಳನ್ನು ಮಾಡಿರುವ ಫಲವಾಗಿ ನೀತಿವಂತ, ಬುದ್ಧಿವಂತನಾಗುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ರಕ್ಷಾ ಕೃತಾ ಯೇನ ಚ ದೀನಜಂತೂ
ರ್ವಾಽಶಕ್ತ ಜಂತೋಶ್ಚ ಸುಖಾಯ ಯತ್ನಃ ॥
ಕ್ಷುಧಾತೃಷಾರ್ತ್ತಾಯ ಜಲಾನ್ನದಾನಂ ।
ಬಲೇನ ನೀತ್ಯಾಪಿ ಬಲೀ ಭವೇತ್ಸಃ ॥ ೧೩೨ ॥

ಅರ್ಥ :- ದೀನರನ್ನು ದುಃಖಿಗಳನ್ನು ರಕ್ಷಿಸುವುದು. ಅಸಮರ್ಥರಿಗೆ ಸಹಾಯಮಾಡುವುದು, ಹೊಟ್ಟೆಹಸಿವೆ, ಮತ್ತು ಬಾಯಾರಿಕೆಯಿಂದ ಬಳಲಿದವರಿಗೆ ಅನ್ನ ಜಲಾದಿಗಳನ್ನಿತ್ತು ಅವರ ಕಷ್ಟಗಳನ್ನು ಪರಿಹರಿಸುವ ಮಾನವನು ತನ್ನ ಆಯುಷ್ಯಾವಸಾನವಾದ ನಂತರ ಮರುಭವದಲ್ಲಿ ಮಹಾ ಬಲಿಷ್ಠನಾಗಿಯೂ, ನೀತಿ ಪಾಲನೆಯಿಂದ ಮಹಾ ನೀತಿಶಾಲಿಯಾಗುವನಾಗಿಯೆ ಜನಿಸುವನು.



ಭಾವಾರ್ಥ :- ಈ ಸಂಸಾರದಲ್ಲಿರುವ ಚಿಕ್ಕ ದೊಡ್ಡ ಪ್ರಾಣಿಗಳನ್ನು ರಕ್ಷಿಸುವುದು ಮಾನವನ ಪರಮ ಕರ್ತವ್ಯವಾಗಿರುತ್ತದೆ. ಹಾಗೆ ಅತಿ ದೀನರೂ, ದುಃಖಿಗಳೂ ಆದ ಜೀವಗಳ ವಿಷಯದಲ್ಲಿ ಹೇಳುವುದೇನು? ಅವನ್ನು ನಿಶ್ಚಯವಾಗಿ ರಕ್ಷಿಸಬೇಕು. ಹೊಟ್ಟೆ ಹಸಿವೆಯಿಂದ ಬಳಲಿದ, ಬಾಯಾರಿಕೆಯಿಂದ ಬೆಂಡಾದ ಜೀವಗಳಿಗೆ ಅನ್ನ, ನೀರು ಮೊದಲಾದುವನ್ನಿತ್ತು ಸಂತೋಷಪಡಿಸುವುದರಿಂದ ಧನಾದಿಗಳ ವೃದ್ಧಿಯಾಗುತ್ತದೆ. ನಿರ್ಬಲರಿಗೆ ಸಹಾಯವನ್ನೀಡುವುದರಿಂದ ಬಲಶಕ್ತಿಯು ನೈತಿಕ ಶಕ್ತಿಯುಂಟಾಗುತ್ತದೆ. ಆದ್ದರಿಂದ ಪರ ಜೀವಗಳಿಗೆ ಸಹಾಯವನ್ನು ಅವಶ್ಯವಾಗಿ ಮಾಡುವುದೇ ಆತ್ಮಶಾಂತಿಯ ಸರಳ ಮಾರ್ಗವಾಗಿರುತ್ತದೆ.

ಮುಂದಕ್ಕೆ ಸಮತಾಭಾವವು ಪ್ರಾಪ್ತವಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸ್ಯಾದ್ದೇವ ! ಜೀವಃ ಸಮತಾ ಸ್ವಭಾವೀ ॥

ಅರ್ಥ :- ಹೇ ಪ್ರಭು ! ಯಾವ ಪುಣ್ಯ ಕರ್ಮದ ಫಲವಾಗಿ ಈ ಜೀವನು ಸಮತಾ ಸ್ವಭಾವೀಯಾಗುವನು. ಅದನ್ನು ವಿವರಿಸಬೇಕು.

ಉತ್ತರ :- ಶ್ರಾದ್ಧೋತ್ತಮಾದೇ ರ್ವಿನಯಂ ಚ ಕೃತ್ವಾ ।
ಯಃ ಶಾಂತ ಮುದ್ರಾಂ ಜಿನದೇವ ಸಾಧೋಃ ॥
ವಿಲೋಕ್ಯ ತುಷ್ಯೇತ್ಸುಜನಾತ್ಸಧರ್ಮಾ ।
ಸ್ಯಾತ್ಕ್ಸೌ ಸ ಮೃತ್ವಾ ಸಮತಾಸ್ವಭಾವೀ ॥ ೧೩೩ ॥

ಅರ್ಥ :- ಯಾವ ಧರ್ಮಾತ್ಮನು ಉತ್ತಮ ಶ್ರಾವಕರಲ್ಲಿ ವಿನಯವುಳ್ಳವನಾಗಿ ಪ್ರಸನ್ನ ಮನಸ್ಕನಾಗುವ, ಜಿನದೇವ, ಜಿನಗುರುಗಳ ಪ್ರಶಾಂತ ರೂಪಮುದ್ರೆಯನ್ನು ಮತ್ತು ಸಾಧು ಸಜ್ಜನರನ್ನು ಕಂಡು ಸಂತೋಷಪಡುವ ಮಾನವನು ತನ್ನ ಮರಣಾನಂತರ ಇದೇ ಭೂಮಿಯಲ್ಲಿ ಸಮತಾಭಾವರೂಪ ಶಾಂತರಸವನ್ನು ಪಡೆಯುವವನಾಗಿಯೆ ಜನಿಸುವನು.

ಭಾವಾರ್ಥ :- ಸುಖ-ದುಃಖಗಳಲ್ಲಿ, ಮಣ್ಣು-ಹೊನ್ನುಗಳಲ್ಲಿ, ಇಷ್ಟ

ಸಂಯೋಗ-ಇಷ್ಟವಿಯೋಗಗಳಲ್ಲಿ, ಅನಿಷ್ಟಸಂಯೋಗ-ಅನಿಷ್ಟವಿಯೋಗಗಳಲ್ಲಿ ಸಮಾನಭಾವನೆಯಿಡುವುದೆ ಸಮತಾಭಾವನೆಯು, ಹೀಗೆ ಸಮತಾರೂಪ ಪರಿಣಾಮಧಾರಿಯಾಗುವುದು ಮಹಾ ದೊಡ್ಡ ಪುಣ್ಯಕರ್ಮದ ಉದಯದಿಂದಲೇ. ಎಲ್ಲಿ ಸಮತಾರೂಪ ಪರಿಣಾಮವಿದೆಯೋ ಅಲ್ಲಿ ಲೋಭ, ಮೋಹ, ರಾಗದ್ವೇಷ, ಮೊದಲಾದ ದುರ್ಗುಣಗಳು ನಷ್ಟವಾಗುತ್ತವೆ. ಇವು ನಷ್ಟವಾಗುವುದರಿಂದ ಪಾಪಕರ್ಮ ಬಂಧವೂ ಕೂಡಾ ಆಗುವುದಿಲ್ಲ. ಆದ್ದರಿಂದ ಪಾವನ ಸಮತಾಭಾವನೆಯು ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ-ಚತುಃ ಸಂಘದಲ್ಲಿ ವಿನಯ, ಭಕ್ತಿಯಿರುವುದರಿಂದಲೂ, ರತ್ನತ್ರಯಧಾರಣೆ ಮಾಡಿರುವ ಸಂಸರ್ಗ(ಸಂಗತಿ)ದಿಂದಲೂ, ಹಸ್ತಗತವಾಗುತ್ತದೆ. ಈ ಸಮತಾರೂಪ ರತ್ನವು ಪ್ರತಿಯೊಬ್ಬ ಭವ್ಯನಿಗೆ ಅತ್ಯಾವಶ್ಯಕವಾಗಿರುತ್ತದೆ.

ಮುಂದಕ್ಕೆ ಧರ್ಮಾತ್ಮನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸುಧಾರ್ಮಿಕಃ ಕೌ ಭವತೀಹ ಜೀವಃ ॥

ಅರ್ಥ :- ಹೇ ದೇವಾದಿದೇವನೇ ! ಎಂಥ ಪುಣ್ಯಕಾರ್ಯಮಾಡಿರುವುದರ ಫಲದಿಂದ ಈ ಜೀವನು ಧರ್ಮಿಷ್ಟನಾಗಿ ಹುಟ್ಟುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಧರ್ಮೋತ್ಸವಂ ಧರ್ಮರತಾನ್ ಜನಾನ್ ಯೋ ।
ದಯಾನ್ವಿತಾನ್ ವಾ ವ್ರತಶೀಲಪೂತಾನ್ ॥
ವಿಲೋಕ್ಯ ತುಷ್ಯೇತ್ಸ್ವಗುರುಂ ಕೃಪಾಬ್ಧಿಂ ।
ಸ ಧಾರ್ಮಿಕೋ ನಾ ಪ್ರಭವೇದಮುತ್ರ ॥ ೧೩೪ ॥

ಅರ್ಥ :- ಧರ್ಮೋತ್ಸವಗಳನ್ನು ದಯಾಶೀಲರಾದವರನ್ನು ವ್ರತ ನಿಯಮಗಳನ್ನು ಪಾಲಿಸುವ ಧರ್ಮಾತ್ಮರನ್ನು, ಮತ್ತು ಕೃಪಾಸಾಗರರಾದ ನಿರ್ಗ್ರಂಥ ಧರ್ಮಗುರುಗಳನ್ನು ನೋಡಿ ಸಂತೋಷಪಡುವ ಮಾನವನು ತನ್ನ ಆಯುಷ್ಯವು ಪೂರ್ಣವಾದೊಡನೆ ಮುಂದಿನ ಭವದಲ್ಲಿ ಮನುಜನಾಗಿ ಜನಿಸಿ ಮಹಾಧರ್ಮಾತ್ಮನಾಗಿಯೇ ಜನಿಸುವನು.



ಭಾವಾರ್ಥ :- ಯಾವ ಮಹಾಮನುಜನು ಈ ಲೋಕದಲ್ಲಿ ಸದಾ ಕಾಲವು ಧಾರ್ಮಿಕ ಕ್ರಿಯೆಗಳಲ್ಲಿ ತನ್ಮಯನಾಗಿರುವನೋ, ಅವನು ಪರಜನ್ಮದಲ್ಲಿಯೂ ಕೂಡಾ ಧರ್ಮಾತ್ಮನಾಗಿಯೇ ಜನಿಸುತ್ತಾನೆ. ಯಾವ ಧರ್ಮ ಕಾರ್ಯಗಳನ್ನು ಮಾಡುವುದರಿಂದ ಆತನ ಆತ್ಮನು ಧರ್ಮಮೂರ್ತಿಯಾಗಿಯೇ ಜನಿಸುವುದು ನಿಶ್ಚಿತವಾದ ಸಂಗತಿಯಾಗಿರುತ್ತದೆ. ಆದ್ದರಿಂದ ಧರ್ಮ ಪ್ರಭಾವ ಕಾರ್ಯಗಳನ್ನು ಮಾಡಿಸುವುದು, ನೋಡುವುದು, ಜಿನಾಲಯಗಳನ್ನು ಕಟ್ಟಿಸುವುದು, ಜಿನಪ್ರತಿಮೆಗಳನ್ನು ಮಾಡಿಸಿ ಪ್ರತಿಷ್ಠೆ ಮಾಡಿಸುವ ಧರ್ಮಿಷ್ಠರನ್ನು ನೋಡಿ ಪ್ರಸನ್ನನಾಗುವುದು, ದಯಾಳು ವ್ರತಿಗಳನ್ನು ನೋಡಿ ಆನಂದಪಡುವುದು, ದೇವ, ಗುರುಗಳ ದರ್ಶನದಲ್ಲಿ ತತ್ಪರನಾಗುವುದು, ಭಕ್ತಿಪೂಜೆಗೈಯುವುದು ಇವೇ ಮೊದಲಾದ ಒಳ್ಳೆಯ ಕೆಲಸಗಳನ್ನು ಮಾಡುವುದು, ಸದಾ ಕಾಲವೂ ತೀರ್ಥಯಾತ್ರಾದಿ ದರ್ಶನಕ್ಕಾಗಿ ಧನವ್ಯಯಮಾಡುವುದು, ಇವೆಲ್ಲವು ಧರ್ಮಕಾರ್ಯಗಳಾಗಿವೆ. ಇಂತಹ ಕೆಲಸಗಳಲ್ಲಿ ಮಗ್ನನಾಗಿರುವವನು ಮುಂದಿನ ಭವದಲ್ಲಿ ನಿಶ್ಚಯವಾಗಿ ಮಹಾ ಧರ್ಮಾತ್ಮನಾಗಿಯೆ ಜನಿಸಿ ಶಾಶ್ವತ ಸುಖಕ್ಕೆ ಭಾಗಿಯಾಗುತ್ತಾನೆ.

ಮುಂದಕ್ಕೆ ನಿರ್ಭಯನಾಗಿರಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸುನಿರ್ಭಯೋ ಚಾನ್ಯಭವೇ ಭವೇನ್ನಾ ॥

ಅರ್ಥ :- ಹೇ ಭಗವಾನ್ ! ಈ ಜೀವನು ಯಾವಯಾವ ಪುಣ್ಯ ಕಾರ್ಯ ಮಾಡಿರುವುದರ ಪ್ರಭಾವದಿಂದ ಪರಲೋಕದಲ್ಲಿ ಜನಿಸಿ ನಿರ್ಭಯದಿಂದ ಜೀವಿಸುವವನಾಗಲು ಕಾರಣವನ್ನು ವಿವರಿಸಬೇಕು.

ಉತ್ತರ :- ದೀನಾಯ ಯೇನಾನ್ನ ಜಲಾಭಯಾದಿ ।
ಕುಭೂಪ ದುಷ್ಟಾದಿ ಜನೈರ್ಹೃತಾಯ ॥
ದತ್ತಾಕೃತಾ ದುಃಖಿಜನಸ್ಯರಕ್ಷಾ ।
ಸ ನಿರ್ಭಯೋ ನಾ ಪ್ರಭವೇದಮುತ್ರ ॥ ೧೩೫ ॥

ಅರ್ಥ :- ದುಷ್ಟರಾಜನಿಂದಾಗಲಿ, ಕ್ರೋಧಿಯೂ, ಪುಂಡನೂ ಆದ

ದುಷ್ಟರಿಂದ ಉಪದ್ರವಿಸಲ್ಪಡುವ ದೀನ ದುಃಖಿಜೀವಗಳಿಗೆ ಅನ್ನ, ನೀರು ಮತ್ತು ಅಭಯವನ್ನಿತ್ತು ಕಷ್ಟ, ತೊಂದರೆಗಳನ್ನು ಹೋಗಲಾಡಿಸುವವನು ಪರಲೋಕದಲ್ಲಿ ನಿಶ್ಚಯವಾಗಿ ನಿರ್ಭಯ ಮಹಾಮಹಿಮನಾದ ನರಶ್ರೇಷ್ಠನಾಗಿಯೇ ಜನಿಸುವನು.

ಭಾವಾರ್ಥ :- ದುರ್ಜನರಿಂದ ಉಪದ್ರವಿಸಲ್ಪಡುವ ಜೀವಗಳು ಸದಾ ಸಮಯವು ಅಶಾಂತಿ, ದುಃಖ ಮತ್ತು ಭಯವಿಹ್ವಲರಾಗಿರುತ್ತವೆ ಎಂಬುದು ಸರ್ವರಿಗೂ ತಿಳಿದ ವಿಷಯವಾಗಿರುತ್ತದೆ. ಅವರಲ್ಲಿ ಸುಖ- ಶಾಂತಿಯ ಲವಲೇಶವು ಹತ್ತಿರ ಸುಳಿಯುವುದಿಲ್ಲವು. ಬಲಿಷ್ಠರಾದವರು ನಿರ್ಬಲರನ್ನು ಉಪದ್ರವಿಸಿ ದುಃಖವನ್ನು ಕೊಡುತ್ತಿರುತ್ತಾರೆ. ಅಂತಹ ದುಃಖಿಗಳಿಗೆ ಧೈರ್ಯ ಹೇಳಿ, ರಕ್ಷಣೆಗೆ ವ್ಯವಸ್ಥೆಮಾಡಿಸಿ ಭೋಜನಾದಿಗಳನ್ನು ಕೊಟ್ಟು ತನ್ನ ಅಧೀನದಲ್ಲಿಟ್ಟುಕೊಂಡು ಅಭಯದಾನವೀಯುವವನು ಪರಜನ್ಮದಲ್ಲಿ ನಿಶ್ಚಯವಾಗಿ ನಿರ್ಭಯದ ಮೂರ್ತಿಯಾಗಿಯೇ ಜನಿಸುವನು.

ಮುಂದಕ್ಕೆ ಉದಾರಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಿನ್ ಸುಕಾರ್ಯೇ ಹಿ ಕೃತೇ ವಿಶೇಷೇ ।
ಚಿತ್ತಂ ಹ್ಯುದಾರಂ ಚ ಭವೇನ್ನರಾಣಾಂ ॥

ಅರ್ಥ :- ಹೇ ಪರಮಗುರುವೇ ! ಯಾವ ಶುಭಕಾರ್ಯಗಳನ್ನು ಮಾಡಿರುವುದರ ಫಲವಾಗಿ ಮಾನವನ ಹೃದಯದಲ್ಲಿ ಉದಾರತೆಯು ಉದ್ಭವಿಸುವುದೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಸತ್ಪಾತ್ರ ದಾನಾದನುಮೋದನಾದ್ವಾ ।
ಮಿಥ್ಯಾದೃಶಾಂ ವಾ ಶಿವಮಾರ್ಗದಾನಾತ್ ॥
ದತ್ವಾನ್ನದಾನಂ ಹೃದಿ ಹರ್ಷಯೋಗಾತ್ ।
ಭವೇನ್ನರಾಣಾಂ ಹೃದಯಂ ಹ್ಯುದಾರಮ್ ॥೧೩೬॥

ಅರ್ಥ :- ವೀತರಾಗಮುನಿಗಳಿಗೆ ಆಹಾರದಾನಕೊಡುವುದು, ಕೊಡುವವರಿಗೆ ಅನುಮೋದನವೀಯುವುದು, ಅಜ್ಞಾನಿಗಳನ್ನು ಮೋಕ್ಷಮಾರ್ಗದಲ್ಲಿ



ಪ್ರವರ್ತಿಸುವಂತೆ ಪ್ರಯತ್ನಿಸುವುದು ಮತ್ತು ಇಂತಹ ಕಾರ್ಯಗಳನ್ನು ಕಂಡು ಪರಮಾನಂದಭರಿತನಾಗುವ ಮಾನವನು ಪರಜನ್ಮದಲ್ಲಿಯೂ ಮಹಾ ಉದಾರ ಮನೋಭಾವನೆಯುಳ್ಳವನಾಗಿಯೇ ಜನಿಸುವನು.

ಭಾವಾರ್ಥ :- ದಾನಮಾಡುವವರು ಅನೇಕರಿರುತ್ತಾರೆ. ಆದರೆ ವೀತರಾಗ ನಿರ್ಗ್ರಂಥ ಮಹಾಯೋಗಿಗಳಿಗೆ ಆಹಾರಕೊಡುವ ಸೌಭಾಗ್ಯವು ಅತಿಶಯ ಪುಣ್ಯದಿಂದಲೇ ಲಭಿಸುವುದು. ನಿರ್ಗ್ರಂಥ ಮುನಿಗಳು ಸಕಲ ಸಂಗ ಪರಿಗ್ರಹತ್ಯಾಗಿಗಳು. ಯಾವ ವಸ್ತುಗಳನ್ನು ಯಾಚಿಸದವರು. ಸಮ್ಯಕ್ ಚಾರಿತ್ರವನ್ನು ಪೂರ್ಣರೀತ್ಯಾ ಪರಿಪಾಲಿಸುವುದಕ್ಕಾಗಿಯೇ ಆಹಾರವನ್ನು ಸ್ವೀಕರಿಸುತ್ತಾರೆ. ಇಂತಹ ನಿರೀಹವೃತ್ತಿಧಾರಕರಾದ ಮುನಿಗಳಿಗೆ ಆಹಾರ ವೀಯಬೇಕೆಂಬ ಪರಿಣಾಮವುಂಟಾಗಬೇಕಾದರೆ ದೇವ, ಗುರು, ಶಾಸ್ತ್ರಗಳಲ್ಲಿ ಅಚಲಭಕ್ತಿಯುಳ್ಳ ಭಕ್ತನಿಗೆ ಉಂಟಾಗುವುದು. ಅಂತಹವನೇ ಅನುಮೋದನೆಯನ್ನೀಯುವುದು, ಅಂಥವನು ತನ್ನ ಆಯುಷ್ಯವನ್ನು ಪೂರ್ಣಮಾಡಿ ಭೋಗಭೂಮಿಯಲ್ಲಿ ಜನಿಸುವನು ಅಥವಾ ದೇವನಾಗಿ ಜನಿಸುವನು. ಆತ ಅಲ್ಲಿಯ ಸುಖಭೋಗಗಳನ್ನು ಅನುಭವಿಸಿ ಆಯುಷ್ಯವು ಪೂರ್ಣವಾದೊಡನೆ ಮಾನವಲೋಕದಲ್ಲಿ ಅತಿಶಯ ಉದಾರವುಳ್ಳ ಮಹಾದಾನಿಯಾಗಿ ಜನಿಸುವನು. ಅಂತ್ಯದಲ್ಲಿ ಸಕಲ ಸಾಂಸಾರಿಕ ವಿಭೂತಿಗಳನ್ನು ತ್ಯಜಿಸಿ ಜೈನೇಶ್ವರೀ ದೀಕ್ಷಾ ಬದ್ಧನಾಗಿ ತಪಸ್ಸನ್ನಾಚರಿಸಿ ಮೋಕ್ಷಲಕ್ಷ್ಮಿಗೆ ಅಧಿಪತಿಯಾಗುತ್ತಾನೆ.

ಮುಂದಕ್ಕೆ ವಾಗ್ಮಿ(ವಾಚಳ)ಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಧೀಮಾನ್ ಭವೇದ್ವಾನ್ಯಭವೇ ಸುವಕ್ತಾ ॥

ಅರ್ಥ :- ಹೇ ಪರಮಗುರುವೇ ! ಈ ಜೀವನು ಯಾವ ಪುಣ್ಯ ಕರ್ಮದ ಮಹಿಮೆಯಿಂದ ಪರಲೋಕದಲ್ಲಿ ಜನಿಸಿ ಮಹಾಬುದ್ಧಿಶಾಲೀ ವಕ್ತೃವಾಗುವನು.

ಉತ್ತರ :- ವಿದ್ಯಾಪ್ರದಾನಂ ವಿದುಷಾಂ ಚ ಸೇವಾ ।
ಯೇನ ಪ್ರಶಂಸಾ ನಿಜಬೋಧಕರ್ತುಃ ॥
ವಿದ್ಯಾರ್ಥಿನೇ ವಾ ಜಿನಶಾಸ್ತ್ರದಾನಂ ।
ಕೃತಂ ಸ ವಕ್ತಾನ್ಯಭವೇ ಭವೇದ್ಧಿ ॥೧೩೭॥

ಅರ್ಥ :- ಈ ವರ್ತಮಾನ ಜನ್ಮದಲ್ಲಿ ಯಾವ ಮನುಷ್ಯನು ವಿದ್ಯಾರ್ಥಿಗಳಿಗೆ ವಿದ್ಯಾದಾನವನ್ನು, ಸರಸ್ವತೀ ಸೇವೆಯನ್ನು, ತನ್ನ ಆತ್ಮೋದ್ಧಾರಕ್ಕಾಗಿ ಸದ್ಗುರುಗಳ ಸೇವೆಯನ್ನು, ಅನೇಕ ಶಾಸ್ತ್ರಗ್ರಂಥಗಳ ದಾನಮಾಡುವವನು ಪರಲೋಕದಲ್ಲಿ ನರರತ್ನನಾಗಿ, ಮಹಾವಾಗ್ಮಿಯಾಗಿ ಜನಿಸುವನು.

ಭಾವಾರ್ಥ :- ವಿದ್ಯಾದಾನದಿಂದ ಆತ್ಮನಲ್ಲಿ ಸತ್ಸಂಸ್ಕಾರವು ಉದ್ಭವಿಸುತ್ತದೆ. ಯಾವನು ಜ್ಞಾನದಾನ, ವಿದ್ಯಾರ್ಥಿಗಳಿಗೆ ಸಹಾಯ, ತೀವ್ರಬುದ್ಧಿಯುಳ್ಳ ವಿದ್ಯಾರ್ಥಿಗಳ ವಿದ್ಯಾವ್ಯಾಸಂಗಕ್ಕಾಗಿ ಸೌಕರ್ಯಮಾಡಿಕೊಡುವುದು, ವಿದ್ವಾಂಸರನ್ನು ಆದರಿಸುವುದು, ಶಾಸ್ತ್ರಗ್ರಂಥಗಳನ್ನು ದಾನಮಾಡುವುದು ಮತ್ತು ಶಾಸ್ತ್ರೋಪದೇಶ, ಧರ್ಮೋಪದೇಶಮಾಡುವ ಮಹಿಮನು ಪರಲೋಕದಲ್ಲಿ ದೊಡ್ಡ ವಾಗ್ಮಿಯಾಗಿಯೇ ಜನಿಸುತ್ತಾನೆ.

ಮುಂದಕ್ಕೆ ಸ್ವತಂತ್ರನಾಗಿರಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಿನ್ ಸುಪುಣ್ಯೇ ಚ ಕೃತೇ ವಿಶೇಷೇ ।
ಜೀವಃ ಸ್ವತಂತ್ರೋಽಪಿ ಸುಖೀ ಭವೇತ್ಕೌ ॥

ಅರ್ಥ :- ಹೇ ಭಗವಾನ್ ! ಈ ಸಂಸಾರೀ ಜೀವನು ಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಸ್ವತಂತ್ರನಾಗಿಯೂ, ಸುಖಿಯಾಗಿಯೂ ಆಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಕುಟುಂಬ ಹೀನಾಯ ತದಾತ್ಮಶಾಂತ್ಯೈ ।
ಬೋಧಂ ಧನಾದಿಂ ಸುಖದಂ ಚ ದತ್ವಾ ॥
ವಸ್ತ್ರಾನ್ನ ಹೀನಾಯ ತದೇವ ತುಷ್ಟೇ -
ಜ್ಜೀವಃ ಸ್ವತಂತ್ರಃ ಸ ಭವೇದಮುತ್ರ ॥೧೩೮॥

ಅರ್ಥ :- ಯಾರು ಕುಟುಂಬರಹಿತರಾದವರ ಆತ್ಮಶಾಂತಿಗಾಗಿ ಬುದ್ಧಿವಾದವನ್ನು ಹೇಳುವನೋ, ಅವರಿಗೆ ಸುಖದ ಸಾಧನಗಳಾದ ಧನ-ಧಾನ್ಯ, ಅನ್ನ-ವಸ್ತ್ರಾದಿಗಳನ್ನಿತ್ತು ಅನುಕೂಲಮಾಡಿಕೊಡುವ ಮಾನವನು ಪರಲೋಕದಲ್ಲಿ ನಿಶ್ಚಯವಾಗಿ ಸ್ವತಂತ್ರನಾಗಿ ಸುಖಿಯಾಗುವನು.



ಭಾವಾರ್ಥ :- ನಿರಾಶ್ರಿತರಿಗೆ ಆಶ್ರಯವನ್ನೀಯುವುದು, ದುಃಖಿಗಳ ದುಃಖವನ್ನು ಹೋಗಲಾಡಿಸುವುದು, ಹೊಟ್ಟೆ ಹಸಿವೆಯಿಂದ ಬಳಲಿದವರಿಗೆ ಹೊಟ್ಟೆ ತುಂಬ ಅನ್ನ ಕೊಡುವುದು, ಬಟ್ಟೆಬರೆಗಳಿಲ್ಲದ ದೀನರಿಗೆ ವಸ್ತ್ರಗಳನ್ನು ಕೊಡುವುದು, ಮಿಥ್ಯಾಜ್ಞಾನಿಗಳ ಮಿಥ್ಯಾತ್ವವನ್ನು ಹೋಗಲಾಡಿಸಿ ಮೋಕ್ಷಮಾರ್ಗವನ್ನು ಬೋಧಿಸುವುದು, ಅಧರ್ಮಿಗಳಿಗೆ ಧರ್ಮಬೋಧೆಯನಿತ್ತು ಸನ್ಮಾರ್ಗಕ್ಕೆ ಹಚ್ಚುವುದು. ಇವೇ ಮೊದಲಾದ ಉತ್ತಮ ಕಾರ್ಯಗಳನ್ನು ಮಾಡುವುದರ ಸತ್ಫಲವಾಗಿ ಜೀವನು ಪರಲೋಕದಲ್ಲಿ ಪರಾಧೀನನಾಗಿ ಜೀವಿಸದೆ ಸ್ವತಂತ್ರನಾಗಿ ಜೀವಿಸುವನು. ಅಂತ್ಯದಲ್ಲಿ ಕರ್ಮಗಳನ್ನು ನಾಶಮಾಡಿ ಸರ್ವಸ್ವತಂತ್ರ ಸಿದ್ಧಪರಮೇಷ್ಠಿಯಾಗುತ್ತಾನೆ.

ಮುಂದಕ್ಕೆ ಸುಂದರ ಶರೀರಧಾರಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ನಾ ಸುಂದರಾಂಗೋ ಭವತೀಹ ಮೃತ್ವಾ ॥

ಅರ್ಥ :- ಹೇ ಪರಮ ದಯಾಮೂರ್ತಿ ದೇವನೇ! ಈ ಜೀವನು ಯಾವಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಪರಲೋಕದಲ್ಲಿ ಸುಂದರ ಶರೀರಧಾರಿಯಾಗಿ ಜನಿಸುವನೆಂಬುದನ್ನು ವಿವರಿಸಬೇಕು.

ಉತ್ತರ :- ಸ್ಯಾತ್ಸರ್ವಜೀವಃ ಶುಭದೇಹಧಾರೀ ।
ಯೇಷಾಂ ಸದಿಚ್ಛಾ ಗುರುದೇವಭಕ್ತಿಃ ॥
ದೃಷ್ಟ್ವಾನ್ಯದೇಹಂ ಭುವಿ ರೋಗಹೀನಂ ।
ತುಷ್ಯೇತ್ಸ ಮೃತ್ವಾ ಭುವಿ ಸುಂದರಾಂಗಃ ॥೧೩೯॥

ಅರ್ಥ :- ಈ ಸಂಸಾರದಲ್ಲಿ ಪ್ರತಿಯೊಬ್ಬ ಸಂಸಾರೀ ಜೀವಗಳಿಗೆ ಉತ್ತಮ ಸುಂದರ ರೂಪವು ಬೇಕೆಂಬ ಆಶೆಯು ಇದ್ದೇ ಇರುತ್ತದೆ. ಅವರು ಸದಾಕಾಲವು ಭಗವಾನ್ ಸರ್ವಜ್ಞದೇವನಲ್ಲಿ ಭಕ್ತಿ, ವೀತರಾಗ ಮುನಿಗಳಲ್ಲಿ ವಿನಯ ಮತ್ತು ಪರರ ನೀರೋಗ ಸುಂದರ ಶರೀರವನ್ನು ಕಂಡು ಸಂತೋಷಪಡುವ ಮಾನವನು ಸತ್ತು ಪರಲೋಕದಲ್ಲಿ ಸುಂದರ ಶರೀರಧಾರಿಯಾಗಿ ಜನಿಸುವನು.

ಭಾವಾರ್ಥ :- ಅತಿಶಯ ಪುಣ್ಯದ ಪ್ರಭಾವದಿಂದಲೇ ರೂಪಶರೀರದ ಪ್ರಾಪ್ತಿಯಾಗುವುದು. ಯಾವನು ಸರ್ವಜ್ಞ ತೀರ್ಥಂಕರ ಪರಮ ಜಿನದೇವನ ಭಕ್ತಿ, ಪೂಜೆ, ಧ್ಯಾನವನ್ನು ಮಾಡಿಕೊಂಡಿರುತ್ತಾನೆಯೋ, ಅವರ ಉಪದೇಶದಿಂದ ಶಾಸ್ತ್ರಜ್ಞಾನಕ್ಕನುಗುಣವಾಗಿ ನಡೆಯುವ, ಗುರುಸೇವೆ, ವೈಯ್ಯಾವೃತ್ತವನ್ನು ಮಾಡಿಕೊಂಡಿರುವ ಹಾಗೆ ಸದಾಕಾಲವು ಸಕಲಜೀವಗಳು ಸುಖಶಾಂತಿಯಿಂದಿರಬೇಕೆಂಬ ಭಾವನೆಯುಳ್ಳ ಶ್ರೇಷ್ಠ ಗುಣಧಾರೀ ಮಾನವನು ಪರಲೋಕದಲ್ಲಿ ಅತಿಶಯ ಪುಣ್ಯಪ್ರಭಾವದಿಂದ ಚೆನ್ನಿಗರ ಚೆನ್ನನಾಗಿಯೇ ಜನಿಸುವನು.

ಮುಂದಕ್ಕೆ ಆದರ, ಸತ್ಕಾರಶಾಲಿಯಾಗಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ! ಮೇ।
ಸನ್ಮಾನನೀಯೋಽನ್ಯ ಭವೇಜ್ಜನೋಽಯಮ್ ॥

ಅರ್ಥ :- ಹೇ ಸ್ವಾಮಿನ್! ಈ ಜೀವನು ಯಾವ ಮತ್ತು ಎಂತಹ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಎರಡನೇ ಜನ್ಮದಲ್ಲಿ ಮಾನ್ಯನು, ಸರ್ವರಿಂದ ಆದರಿಸಲ್ಪಡುವವನಾಗಿ ಜನಿಸುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಯೇನಾತ್ಮಭಕ್ತ್ಯಾ ಗುರುದೇವಸೇವಾ।
ಸ್ನೇಹಪ್ರವೃತ್ತಿಶ್ಚ ಮಿಥಃ ಕೃತಾಹಿ ॥
ತದ್ವಾಕ್ ಪ್ರಮಾಣಂ ಮನಸಾ ಕೃತಂ ವೈ।
ಸನ್ಮಾನನೀಯೋಽನ್ಯಭವೇಭವೇತ್ಸಃ ॥೧೪೦॥

ಅರ್ಥ :- ಆತ್ಮಭಕ್ತಿಯ ಭಾವನೆಯಿಂದ ತೀರ್ಥಂಕರ ಪರಮದೇವನನ್ನು ಸೇವಿಸುವ, ವೀತರಾಗ ದಿಗಂಬರ ಯೋಗಿಗಳನ್ನು ಪೂಜಿಸುವ, ದೇವ, ಶಾಸ್ತ್ರ, ಗುರುಗಳ ವಚನಗಳನ್ನು ಮನ-ವಚನ-ಕಾಯಗಳಿಂದ ಯಥಾರ್ಥವೆಂದು, ಪ್ರಮಾಣವೆಂದು ತಿಳಿಯುವ ಮತ್ತು ಸರ್ವಜೀವಗಳಲ್ಲಿ ಪರಸ್ಪರ ಪ್ರೀತಿಯುಕ್ತ



ವ್ಯವಹಾರವನ್ನಿಟ್ಟುಕೊಳ್ಳುವ ಮಾನವನು ತನ್ನ ಆಯುಷ್ಯವು ಪೂರ್ಣವಾಗಿ ಪರಲೋಕದಲ್ಲಿ ಜನ್ಮತಾಳಿ ಶ್ರೇಷ್ಠ ಪುರುಷರಿಂದ ಮಾನನೀಯನಾಗುತ್ತಾನೆ.

ಭಾವಾರ್ಥ :- ಸಾಧು-ಸಜ್ಜನರಿಂದ ಪ್ರಶಂಸಿಸಲ್ಪಡುವವನೇ ಮಾನನೀಯನು. ಅಂತಹ ಮಾನನೀಯತ್ವವು ಪ್ರಾಪ್ತವಾಗಬೇಕಾದರೆ, ಪೂಜ್ಯ ಪುರುಷರ ಪೂಜೆ, ಸೇವೆಮಾಡುವುದು, ವೀತರಾಗ ಸರ್ವಜ್ಞದೇವನ ವಚನಗಳು ಪ್ರಮಾಣರೂಪಗಳಾಗಿವೆ ಎಂದು ತಿಳಿದು ಆದರಂತೆ ವರ್ತಿಸುವುದು, ಗುರು, ಶಾಸ್ತ್ರ ಮತ್ತು ಜಿನದೇವರ ಆಜ್ಞೆಯನ್ನು ಉಲ್ಲಂಘಿಸದೆ ಇರುವುದು, ಯಾವ ಜೀವಗಳನ್ನು ಅಪಮಾನಿಸದೆ ಇರುವುದು, ವೈರ-ವಿರೋಧವಿಲ್ಲದ ಮನೋಭಾವನೆ ಇರುವುದು, ಸರ್ವರಲ್ಲಿ ಅನುರಾಗ ಪರಿಣಾಮವಿರುವುದು. ಇವೇ ಮೊದಲಾದ ವಿಶಾಲ ಮನೋಭಾವನೆಯುಳ್ಳ ಮಾನವನು ಮರುಭವದಲ್ಲಿ ಮಹಾ ವೈಭವಶಾಲಿಯಾಗಿಯೂ, ಮಾನನೀಯನೂ ಆದ ನರಶ್ರೇಷ್ಠನಾಗಿ ಜನಿಸುವನು.

ಮುಂದಕ್ಕೆ ಜ್ಞಾನಿವ್ರತಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ! ಮೇ।
ಜ್ಞಾನೀವ್ರತೀ ಸ್ಯಾನ್ಮನುಜೋಽನ್ಯಲೋಕೇ ॥

ಅರ್ಥ :- ಹೇ ಭಗವಾನ್! ಈ ಜೀವನು ಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಪರಲೋಕದಲ್ಲಿ ಜ್ಞಾನೀವ್ರತಿಯಾಗಿ ಜನಿಸುವುದೆಂಬುದನ್ನು ದಯವಿಟ್ಟು ಅಪ್ಪಣೆಕೊಡಿಸಬೇಕು.

ಉತ್ತರ :- ಯೇನ ಕ್ರಿಯಾಯುಕ್ತ ನರಪ್ರಶಂಸಾಽ।
ನಾಚಾರ ವೃತ್ತೇಶ್ಚ ಕೃತಾ ಪ್ರಣಿಂದಾ ॥
ಫಲಂ ವ್ಯಥಾದಂ ವ್ಯಸನಸ್ಯ ಬುಧ್ವಾ।
ಜ್ಞಾನೀವ್ರತೀ ಸ್ಯಾದಿತಿ ಭಾಗ್ಯಭಾಕ್ ಸಃ ॥೧೪೧॥

ಅರ್ಥ :- ಸಪ್ತವ್ಯಸನಗಳು ಮಹಾದುಃಖಕ್ಕೆ ಕಾರಣವಾದವುಗಳೆಂದು ತಿಳಿದು, ಅತಿಚಾರಾದಿ ಅಚಾರಗಳನ್ನು ನಿಂದಿಸುತ್ತ, ವ್ರತ, ಉಪವಾಸ, ಜಿನ

ಪೂಜೆ, ಪಾತ್ರದಾನಾದಿ ಸತ್ಕ್ರಿಯೆಗಳನ್ನು ಪಾಲಿಸುವ ಕ್ರಿಯಾಯುಕ್ತ ಪುರುಷರನ್ನು ಪ್ರಶಂಸಿಸುವ ಮಹಾಭಾಗ್ಯಶಾಲೀ ಪುರುಷನು ಪರಲೋಕದಲ್ಲಿ ಶ್ರೇಷ್ಠ ಮಾನವನಾಗಿ ಜನಿಸಿ ಮಹಾಜ್ಞಾನಿಯೂ ಮತ್ತು ವ್ರತಿಯೂ ಆಗುವನು.

ಭಾವಾರ್ಥ :- ಜೂಜಾಡುವುದು, ಕಳ್ಳತನ, ಬೇಟೆ, ವೇಶ್ಯಾಗಮನ, ಪರಸ್ತ್ರೀಸೇವನೆ, ಮಾಂಸಭಕ್ಷಣ, ಮದ್ಯಪಾನ ಇವುಗಳಿಗೆ ಸಪ್ತವ್ಯಸನಗಳೆಂದು ಹೇಳುತ್ತಾರೆ. ಇವು ಸರ್ವದುಃಖಗಳಿಗೆ ಕಾರಣಗಳಾಗಿವೆ. ಇವುಗಳ ಸೇವನೆಯಿಂದ ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ, ಘೋರ ದುಃಖವನ್ನು ಅನುಭವಿಸಬೇಕಾಗುತ್ತದೆ. ಈ ವಿಷಯವನ್ನು ತಿಳಿದ ಪಾಪ ಭೀರುವಾದ ಮಾನವನು ಸದಾ ತ್ಯಜಿಸಿ ಶಾಸ್ತ್ರೋಕ್ತ ಕ್ರಿಯಾಕಾಂಡಗಳನ್ನು ನಿರ್ದೋಷವಾಗಿ ಪಾಲಿಸುವನೋ, ಅರ್ಥಾತ್ :- ಪ್ರತಿನಿತ್ಯವೂ ಜಿನಪೂಜೆ, ಮುನಿಗಳಿಗೆ ಆಹಾರಾದಿದಾನ, ವ್ರತ, ಉಪವಾಸಗಳನ್ನು ಆಚರಿಸುವ, ಪರ್ವ ದಿವಸಗಳಲ್ಲಿ ಉತ್ಸವ, ರಥೋತ್ಸವಾದಿಗಳ ಮೂಲಕ ಧರ್ಮಪ್ರಭಾವನೆ, ಶಾಸ್ತ್ರ ಸ್ವಾಧ್ಯಾಯ ಮತ್ತು ಧರ್ಮಾತ್ಮರ ಸೇವೆಗೈಯುವವನು ಮರಣಾನಂತರ ಪರಭವದಲ್ಲಿ ಜ್ಞಾನಿಯಾಗಿಯೂ, ವ್ರತಿಯಾಗಿಯೂ ಆಗಿ ಲೋಕದಲ್ಲಿ ಮಹಾಭಾಗ್ಯಶಾಲಿಯೆಂದು ಪ್ರಸಿದ್ಧಿಯಾಗುವನು.

ಮುಂದಕ್ಕೆ ಅಣ್ಣತಮ್ಮಂದಿರ(ಸಹೋದರ)ರಲ್ಲಿ ಪ್ರೇಮಭಾವನೆಯು ಉಂಟಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ! ಮೇ ।
ಪ್ರೀತಿರ್ಭವೇದ್ ಬಂಧುಜನೇ ಮಿಥಃಕಾ ॥

ಅರ್ಥ :- ಹೇ ದಯಾನಿಧೇ! ದಯದೋರಿ ಈ ಜೀವನು ಯಾವ ಪುಣ್ಯಕರ್ಮದ ಫಲವಾಗಿ ತನ್ನ ಸಹೋದರ ಮತ್ತು ಬಂಧುಜನಗಳ ಪ್ರೇಮ ಭಾಜನನಾಗುವನೆಂಬುದನ್ನು ವರ್ಣಿಸಬೇಕು.

ಉತ್ತರ :- ಶ್ರೀದಾಂ ಸುಶಾಂತಿಂ ಭುವಿ ಕಾರಯಿತ್ವಾ ।
ಬಂಧೋರ್ಮಿಥಃ ಸ್ನೇಹಕರೀಂ ಪ್ರವೃತ್ತಿಂ ॥
ವಿಲೋಕ್ಯ ತುಷ್ಯೇತ್ಪ್ರಿಯ ಬಾಂಧವಾನಾಂ ।
ಸ್ನೇಹೀಮಿಥಃ ಸ್ಯಾದಿತಿ ತಸ್ಯಕೃತ್ಯಾತ್ ॥೧೪೨॥



ಅರ್ಥ :- ಸಂಸಾರದಲ್ಲಿ ಲಕ್ಷ್ಮಿಯವೃದ್ಧಿಯನ್ನುಂಟುಮಾಡುವ ಶಾಂತಿಯನ್ನು ಸ್ಥಾಪಿಸುವುದು, ಅಣ್ಣ ತಮ್ಮಂದಿರರಲ್ಲಿ ಪರಸ್ಪರ ಸ್ನೇಹವನ್ನು ಬೆಳೆಸುವ ಕಾರ್ಯವನ್ನು ಮಾಡುವುದು ಮತ್ತು ಪರಸ್ಪರ ಸ್ನೇಹದಿಂದಿರುವ ಅಣ್ಣ-ತಮ್ಮಂದಿರರನ್ನು, ಬಂಧುಬಾಂಧವರನ್ನು ಕಂಡು ಆನಂದಪಡುವ ಮಾನವನು ಈ ತನ್ನ ಶ್ರೇಷ್ಠಕಾರ್ಯಗಳ ಫಲವಾಗಿ ಅಣ್ಣ-ತಮ್ಮಂದಿರಲ್ಲಿಯೂ, ಬಂಧು-ಬಾಂಧವರಲ್ಲಿಯೂ ಸ್ನೇಹವನ್ನುಂಟುಮಾಡುವವನಾಗುತ್ತಾನೆ.

ಭಾವಾರ್ಥ :- ಅಣ್ಣತಮ್ಮಂದಿರು ಪರಸ್ಪರ ಸ್ನೇಹಭಾವದಿಂದಿರುವುದು ಮಹಾಸೌಭಾಗ್ಯದ ವಿಷಯವಾಗಿರುತ್ತದೆ. ಇಂತಹ ಸೌಭಾಗ್ಯವು ಪ್ರಾಪ್ತವಾಗಬೇಕಾದರೆ ಪೂರ್ವಭವದಲ್ಲಿ ಯಾರಿಗೂ, ಎಂದಿಗೂ ಕೇಡಕನ್ನು ಬಯಸುವುದಿಲ್ಲವೋ, ಸರ್ವರಲ್ಲಿ ಶಾಂತಿಸಮಾಧಾನದಿಂದ ವರ್ತಿಸುವನೋ ಅದರ ಸ್ಥಾಪನೆಗಾಗಿ ಹಗಲಿರುಳು ಪ್ರಯತ್ನಮಾಡುವನೋ, ಧರ್ಮಾತ್ಮರನ್ನು ನೋಡಿ ಮನಃಪೂರ್ವಕ ಆನಂದದಿಂದಿದ್ದ ಮಾನವನು ಪರಲೋಕದಲ್ಲಿ ಸರ್ವರ ಪ್ರೇಮಕ್ಕೆ ಭಾಜನನಾಗುತ್ತಾನೆ.

ಮುಂದಕ್ಕೆ ಕಾರಣವಶಾತ್ ಕೋಪಗೊಂಡು ಹೋಗಿದ್ದ ಪುತ್ರನ ಪುನಃ ಸಮಾಗಮನವಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ವಿಯೋಗಿ ಪುತ್ರಸ್ಯ ಭವೇತ್ಸುಲಾಭಃ ।
ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ! ಮೇ ॥

ಅರ್ಥ :- ಹೇ ಕರುಣಾನಿಧೇ! ಈ ಜೀವನ ಪುತ್ರವಿಯೋಗವಾಗಿ ಪರದೇಶಕ್ಕೆ ಹೋಗಿದ್ದರೂ ಪುನಃ ಆತನ ಪ್ರಾಪ್ತಿಯು ಯಾವ ಪುಣ್ಯದ ಫಲವೆಂದು ಹೇಳಬೇಕು.

ಉತ್ತರ :- ದತ್ತಾ ಧೃತಿಃ ಪುತ್ರವಿಯೋಗಿನೇ ಯೈ - ।
ಸ್ತತ್ಪುತ್ರ ಲಾಭಾಯ ಕೃತಃ ಪ್ರಯತ್ನಃ ॥
ಸಂಯೋಗ ವಾರ್ತಾ ಹಿ ಕೃತಾ ನ ಚಾನ್ಯಾ ।
ಽಸ್ಮಾದ್ ಯೋಗ್ಯ ಕೃತ್ಯಾದಿತಿ ಪುತ್ರಲಾಭಃ ॥೧೪೩॥

ಅರ್ಥ :- ಯಾವನಾದರೊಬ್ಬ ಮಾನವನ ಪುತ್ರವಿಯೋಗವಾದರೆ ಅರ್ಥಾತ್ ಯಾವುದಾದರೊಂದು ಕಾರಣದಿಂದ ತಂದೆಯಿಂದ ಬೇರೆಯಾಗಿ ಪರದೇಶಕ್ಕೆ ಹೋಗಿದ್ದರೆ ಅವನಿಗೆ ಧೈರ್ಯಹೇಳುವುದು, ಬಂದೇಬರುತ್ತಾನೆಂಬ ಸಮಾಧಾನಪಡಿಸುವುದು ಇವೇ ಮೊದಲಾದ ಕಾರ್ಯಗಳನ್ನು ಮಾಡಿಕೊಂಡು ಇರುವವನಿಗೆ ತನ್ನಿಂದ ಅಗಲಿಹೋಗಿದ್ದ ಪುತ್ರನ ಪ್ರಾಪ್ತಿಯಾಗುವುದು.

ಭಾವಾರ್ಥ :- ಒಂದೊಂದು ಕಾರಣದಿಂದ ಮನೆಯಲ್ಲಿ ಜಗಳವಾಡಿ ಹೇಳದೆ-ಕೇಳದೆ ಎಲ್ಲಿಯಾದರೂ ಹೋಗಿದ್ದರೆ ಅಥವಾ ಮೋಸಗಾರಿಕೆಯಿಂದ ಅಪಹರಿಸಲ್ಪಟ್ಟು ಹೋಗಿದ್ದರೆ ಅಂತಹ ದುಃಖಾವಸ್ಥೆಯಲ್ಲಿ ಆ ಹುಡುಗನ ತಂದೆ-ತಾಯಿಗಳಿಗೂ, ಬಂಧು-ಬಾಂಧವಾದಿಗಳಿಗೂ ಧೈರ್ಯ ಹೇಳುವುದು, ಆತನ ಅನ್ವೇಷಣಕ್ಕಾಗಿ ಸ್ವಯಂಪ್ರಯತ್ನಿಸುವುದು, ಒಂದು ವೇಳೆ ಕಂಡುಹಿಡಿದವನು ಆವನು ಮನೆಗೆ ಬರುವುದಿಲ್ಲವೆಂದು ಹಠಹಿಡಿದಾಗ ಸಮಾಧಾನದ ಮಾತುಗಳನ್ನು ಹೇಳಿ ಮನೆಗೆ ಕರೆದುಕೊಂಡು ಬರುವುದು ಇವೇ ಮೊದಲಾದ ಕಾರ್ಯಗಳಿಂದ ಆತನ ತಂದೆ-ತಾಯಿಗಳಿಗೂ, ಇತರ ಬಂಧುಬಾಂಧವಾದಿಗಳಿಗೂ ಸಂತೋಷಪಡಿಸಿ, ಉಪಕಾರವನ್ನು ಮಾಡಿರುವ ಪುಣ್ಯಕಾರ್ಯದ ಸತ್ಫಲವಾಗಿ ಪುತ್ರಾದಿಗಳ ಅಥವಾ ಬಂಧು-ಬಾಂಧವಾದಿಗಳ ವಿಯೋಗ ದುಃಖವು ಸಂಭವಿಸುವುದಿಲ್ಲವು. ಕಾರಣವಶಾತ್ ಪುತ್ರವಿಯೋಗವಾದರು ಸ್ವಯಂ ಹಿಂದಿರುಗಿ ಮನೆಗೆ ಬರುವನು. ಅಂತಹ ಪುರುಷರಿಗೆ ಇಷ್ಟವಿಯೋಗ ದುಃಖವು ಸಂಭವಿಸುವುದಿಲ್ಲವು.

ಮುಂದಕ್ಕೆ ತಂದೆ-ಮಕ್ಕಳ ಸ್ನೇಹದ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ! ಮೇ ।
ಸ್ನೇಹಃ ಸುಪುತ್ರಸ್ಯ ಮಿಥಃ ಪಿತುಶ್ಚ ॥

ಅರ್ಥ :- ಹೇ ಪ್ರಭುವೇ! ಯಾವ ಪುಣ್ಯಕರ್ಮದ ಪ್ರಭಾವದಿಂದ ತಂದೆ-ಮಕ್ಕಳಲ್ಲಿ ಪರಸ್ಪರ ಸ್ನೇಹ ಉಂಟಾಗುವುದೆಂಬುದನ್ನು ದಯವಿಟ್ಟು ವಿವರಿಸಬೇಕು.



ಉತ್ತರ :- ಪಿತುಃ ಸುಪುತ್ರಸ್ಯ ಮಿಥಃ ಪ್ರಮೋದಂ ।
ದೃಷ್ಟ್ವೇತಿ ತುಷ್ಯೇದ್ವಿನಯೋಪಚಾರಮ್ ॥
ವಿನಾಶ್ಯವೈರಂ ಹ್ಯಕರೋತ್ತ್ವಶಾಂತಿಂ ।
ಸ್ನೇಹೋದ್ವಯೋಃ ಸ್ಯಾತ್ಸುಕೃತೇಃ ಪ್ರತಾಪಾತ್ ॥೧೪೪॥

ಅರ್ಥ :- ಯಾರು ತಂದೆ-ಮಕ್ಕಳ ಪರಸ್ಪರ ಪ್ರೇಮ, ಮೋಹ, ಸ್ನೇಹವನ್ನು ಅವರಲ್ಲಿರುವ ಆದರ-ಸತ್ಕಾರವನ್ನು ಕಂಡು ಪ್ರಸನ್ನನಾಗಿದ್ದಾನೆಯೋ ಅಥವಾ ತಂದೆ-ಮಕ್ಕಳಲ್ಲಿರುವ ವಿರೋಧವನ್ನು ಹೋಗಲಾಡಿಸಿ, ಶಾಂತಿ, ಸಮಾಧಾನ ಸ್ಥಾಪಿಸುವ ಮಾನವನು ತನ್ನ ಪುಣ್ಯಕಾರ್ಯಗಳ ಫಲವಾಗಿ ತಂದೆ-ಮಕ್ಕಳಲ್ಲಿ ಗಾಢವಾದ ಸ್ನೇಹವು ಉಂಟಾಗುತ್ತದೆ.

ಭಾವಾರ್ಥ :- ತಂದೆಯಲ್ಲಿ ಅನುರಾಗವು, ವಿನಯವು ಮತ್ತು ಅವರ ಆಜ್ಞಾಪಾಲನೆ ಇವೆಲ್ಲವು ಪುತ್ರನ ಪ್ರಥಮಕರ್ತವ್ಯವಾಗಿರುತ್ತದೆ. ಅದರಂತೆ ಪುತ್ರನ ಪಾಲನೆ, ಕೆಟ್ಟದಾರಿಗೆ ಹೋಗದಂತೆ ತಡೆಯುವುದು, ವಿದ್ಯಾಭ್ಯಾಸ ಮಾಡಿಸಿ ವ್ಯಾಪಾರಾದಿಗಳಲ್ಲಿ ತಜ್ಞನನ್ನಾಗಿ ಮಾಡುವುದು ಮತ್ತು ಧಾರ್ಮಿಕ ಮನೋಭಾವನೆ ಉಳ್ಳವನನ್ನಾಗಿ ಮಾಡುವುದು, ಇವೆಲ್ಲವು ಕುಟುಂಬದ ಸುಖ ಸೌಕರ್ಯಗಳ ಸಾಧನಗಳಾಗಿರುತ್ತವೆ. ಆ ಕುಟುಂಬದವರಲ್ಲಿ ಸುಖಶಾಂತಿಯ ಸಾಮ್ರಾಜ್ಯವೇ ನೆಲೆಸುವುದು ಮಹಾಭಾಗ್ಯದ ಫಲವಾಗಿರುತ್ತದೆ. ಯಾವ ಜೀವನು ಪೂರ್ವಜನ್ಮದಲ್ಲಿ ಕೌಟುಂಬಿಕ ಸುಖಸಂತೋಷವನ್ನು ಕಂಡು ಆನಂದ ಭರಿತನಾಗಿರುವವನು ಸತ್ತು ಪರಲೋಕದಲ್ಲಿಯೂ ಕೂಡ ತನ್ನ ಕುಟುಂಬದವರೊಡನೆ ಅತಿಶಯ ಸ್ನೇಹವುಳ್ಳವನಾಗುತ್ತಾನೆ.

ಮುಂದಕ್ಕೆ ಗರ್ಭದಲ್ಲಿ ಸತ್ಪುತ್ರನೇ ಜನಿಸುವ ಲಕ್ಷಣಗಳನ್ನು ಹೇಳುತ್ತಾರೆ.

ಪ್ರಶ್ನೆ :- ಕಥಂ ಸುಪುತ್ರಸ್ಯ ಸ್ಥಿತಿಃ ಪ್ರಗಮ್ಯಾ ।
ಕೃತ್ವಾ ಕೃಪಾ ಮೇ ವದ ಮಾತೃಗರ್ಭೇ ॥

ಅರ್ಥ :- ಹೇ ಪರಮದೇವನೇ! ದಯಮಾಡಿ ಸ್ತ್ರೀಗರ್ಭದಲ್ಲಿ ಸುಪುತ್ರನ ಜನನವಾಗುವುದಿದ್ದರೆ ಯಾವಯಾವ ಚಿನ್ಹೆಗಳು ತಲೆದೋರುವುವೆಂಬುದನ್ನು ವಿವರಿಸಬೇಕು.

ಉತ್ತರ :- ಗರ್ಭೇ ಸುಪುತ್ರಾಗಮನಾತ್ಪ್ರಸಾದಃ ।
ಮಾತುಃ ಪಿತುರ್ವಾ ವಿಮಲೋವಿಚಾರಃ ॥
ದಾನಾರ್ಚನಾದೌ ಚ ಸದಾ ಪ್ರವೃತ್ತಿ ।
ಜ್ಞೇಯಂ ಸುಕೃತಾದ್ಧಿ ಸುಪುತ್ರಜನ್ಮ ॥೧೪೫॥

ಅರ್ಥ :- ಒಂದುವೇಳೆ ತಾಯಿಯ ಗರ್ಭದಲ್ಲಿ ಪುತ್ರನ ಜನನವಾಗುವುದಿದ್ದರೆ ಮಾತಾಪಿತೃಗಳ ಹೃದಯದಲ್ಲಿ ಪ್ರಸನ್ನತೆಯು, ನಿರ್ಮಲವಿಚಾರವು ಮತ್ತು ದಾನಪೂಜಾದಿ ಶುಭಕಾರ್ಯಗಳಲ್ಲಿ ಪ್ರವೃತ್ತಿಯು ಇವೇ ಮೊದಲಾದ ಕ್ರಿಯೆಗಳು ಸಂಭವಿಸುತ್ತಿದ್ದರೆ, ಈ ಗರ್ಭದಲ್ಲಿ ಪುತ್ರನ ಜನನವೇ ಆಗುವುದೆಂದು ತಿಳಿಯಬೇಕು.

ಭಾವಾರ್ಥ :- ತಾಯಿಯ ಗರ್ಭದಿಂದ ಎಂತಹ ಪುತ್ರನ ಜನನವಾಗುವುದಿದ್ದರೆ ಅಂತಹ ಭಾವನಾತರಂಗಗಳು ಉದ್ಭವಿಸುವವು. ಒಂದುವೇಳೆ ಆ ಮಗವು ಶೂರವೀರನಾಗುವವನಿದ್ದರೆ ಮಾತಪಿತೃಗಳ ವಿಚಾರವು ಯುದ್ಧಗಳಲ್ಲಿ ವಿಜಯವನ್ನು ಪಡೆಯಬೇಕೆಂದು, ಧರ್ಮಾತ್ಮನಾಗುವವನಿದ್ದರೆ ಮಾತಾಪಿತೃಗಳ ಪರಿಣಾಮವು ಜಿನಪೂಜೆ, ಪಾತ್ರದಾನ, ತೀರ್ಥಯಾತ್ರಾದರ್ಶನ ಮೊದಲಾದ ಶುಭಕಾರ್ಯಗಳಲ್ಲಿ ಪ್ರೀತಿಯು, ಇವೇ ಮೊದಲಾದ ಶುಭ ಪರಿಣಾಮಗಳಿಂದ ಸತ್‌ಪುತ್ರನ ಜನನವೇ ಆಗುವುದೆಂದು ನಿಶ್ಚಯಿಸಿಕೊಳ್ಳಬೇಕು.

ಮುಂದಕ್ಕೆ ಇಚ್ಛಿತ ಪದಾರ್ಥಗಳ ಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪುಣ್ಯೋದಯಾದ್ವಾಂಛಿತದಂ ಸುವಸ್ತು ।
ಕಸ್ಮಾತ್ಪ್ರಭೋ ! ಮೇ ಲಭತೇ ವದಾತ್ಮಾ ॥

ಅರ್ಥ :- ಹೇ ಸ್ವಾಮಿನ್ ! ಯಾವಯಾವ ಪುಣ್ಯಕರ್ಮಗಳ ಉದಯದಿಂದ ಈ ಜೀವನಿಗೆ ಇಚ್ಛಿತಪದಾರ್ಥಗಳು ಲಭಿಸುತ್ತವೆಂಬುದನ್ನು ಹೇಳಬೇಕು.

ಉತ್ತರ :- ಭವ್ಯಾಯ ಸಂಘಾಯ ಚತುರ್ವಿಧಾಯ ।
ಯೇನ ಪ್ರದತ್ತಂ ವಿಮಲೌಷಧಾನ್ನಂ ॥
ಸರ್ವಾತ್ಮ ಸೌಖ್ಯಾಯ ಕೃತಾಭಿಲಾಷಾ ।
ದಿವ್ಯಂ ನರಃ ಕೌ ಲಭತೇ ಸುವಸ್ತು ॥೧೪೬॥



ಅರ್ಥ :- ಯಾವ ಭವ್ಯಾತ್ಮನು ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ ಈ ಚತುಃಸಂಘಕ್ಕೆ ಪವಿತ್ರವು, ನಿರ್ದೋಷವೂ ಆದ ಔಷಧ, ನಿರ್ಮಲ ಆಹಾರ ಜಲಾದಿಗಳನ್ನು ಕೊಡುವುದು ಸಕಲ ಜೀವಗಳು ಸುಖಿಗಳಾಗಬೇಕೆಂದು ವಿಚಾರಿಸುವುದು, ಇವೇ ಮೊದಲಾದ ಸತ್ಪರಿಣಾಮಗಳ ಫಲವಾಗಿ ಪರಜನ್ಮದಲ್ಲಿ ಇಚ್ಛಿತ ಪದಾರ್ಥಗಳನ್ನು ಪಡೆಯುವ ಮಹಾನ್ ಪುರುಷನಾಗಿ ಜನಿಸುವನು.

ಭಾವಾರ್ಥ :- ಸತ್ಪಾತ್ರದಾನದಿಂದ ಧನ-ಧಾನ್ಯಾದಿವೃದ್ಧಿಯೂ, ಆಹಾರದಾನ, ಔಷಧದಾನ, ಶಾಸ್ತ್ರದಾನ, ವಸತಿದಾನಾದಿಗಳನ್ನು ಮಾಡುವ ಪುಣ್ಯಪುರುಷನು ಮರಣಾನಂತರ ಭೋಗಭೂಮಿಯಲ್ಲಿಯೇ ಜನಿಸುತ್ತಾನೆ. ಅಲ್ಲಿ ಕಲ್ಪವೃಕ್ಷಗಳಿಂದ ಇಚ್ಛಿತ ಪದಾರ್ಥಗಳ ಪ್ರಾಪ್ತಿಯಾಗುವುದು. ಅಲ್ಲಿಯ ಆಯುಷ್ಯವು ಪೂರ್ಣವಾಗಿ ಸ್ವರ್ಗದಲ್ಲಿ ದೇವನಾಗಿ ಜನಿಸುತ್ತಾನೆ. ಮತ್ತು ಅಲ್ಲಿಯೂ ಕೂಡಾ ಇಚ್ಛಿತ ಭೋಗೋಪಭೋಗಗಳನ್ನು ಅನುಭವಿಸುತ್ತಾನೆ. ಆದ್ದರಿಂದ ಇಚ್ಛಿತ ಫಲವನ್ನು ಪಡೆಯಬೇಕೆಂದಿದ್ದರೆ ಪ್ರತಿಯೊಬ್ಬ ಭವ್ಯನು ಸತ್ಪಾತ್ರದಾನಮಾಡಬೇಕೆಂಬ ವ್ರತವನ್ನು ಮಾಡಬೇಕು. ಒಂದುವೇಳೆ ಮುನಿಗಳು ಇರುವಲ್ಲಿಗೆ ಹೋಗಿ ದಾನವಿತ್ತು ಪುಣ್ಯಭಾಗಿಗಳಾಗಬೇಕು. ದಾನದಿಂದಲೇ ಮಾನವ ಜನ್ಮವು ಸಾರ್ಥಕವಾಗುವುದು.

ಮುಂದಕ್ಕೆ ದೇವಪರ್ಯಾಯವು ಪ್ರಾಪ್ತವಾಗಬೇಕಾದ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸ್ವರ್ಗೇ ಚ ಜೀವೋ ಭವತೀಹ ದೇವಃ ॥

ಅರ್ಥ :- ಹೇ ಪರಮಾತ್ಮನೇ ! ಈ ಜೀವನು ಯಾವಯಾವ ಪುಣ್ಯ ಕಾರ್ಯಮಾಡಿರುವ ಸತ್ಫಲವಾಗಿ ಸ್ವರ್ಗದಲ್ಲಿ ದೇವನಾಗಿ ಜನಿಸುವನೆಂಬುದನ್ನು ವಿವರಿಸಬೇಕು.

ಉತ್ತರ :- ವ್ರತೋಪವಾಸೇನ ತಪೋಜಪಾಭ್ಯಾಂ ।
ದೇವಾದಿ ಸೇವಾಕರಣೇನ ಭಕ್ತ್ಯಾ ॥

ಸತ್ತೀರ್ಥಯಾತ್ರಾರ್ಚನ ದಾನತಃ ಸ್ಯಾತ್ ।
ಶುಭೋಪಯೋಗೈರ್ದಿವಿಜೋ ಭವೇತ್ಸಃ ॥೧೪೭॥

ಅರ್ಥ :- ನಾನಾವ್ರತ, ಜಪ, ತಪ, ಉಪವಾಸ ಮತ್ತು ಧ್ಯಾನ ಮಾಡುವ, ಭಕ್ತಿಪೂರ್ವಕ ದೇವ, ಶಾಸ್ತ್ರ, ಗುರುಗಳ ಸೇವೆಸಲ್ಲಿಸುವ ಮತ್ತು ತೀರ್ಥಯಾತ್ರಾ ದರ್ಶನ, ದೇವಪೂಜೆ ಮತ್ತು ಸತ್ಪಾತ್ರದಾನಾದಿಗಳನ್ನು ಮಾಡುವ ಭವ್ಯಾತ್ಮನು ತಾನು ಮಾಡಿರುವ ಅನೇಕ ಪುಣ್ಯಕಾರ್ಯಗಳ ಮಹತ್ತರ ಫಲವಾಗಿ ಸ್ವರ್ಗದಲ್ಲಿ ದೇವನಾಗಿಯೇ ಜನಿಸುತ್ತಾನೆ.

ಭಾವಾರ್ಥ :- ಸಂಸಾರದಲ್ಲಿ ದೇವಪರ್ಯಾಯವು ಮಹಾಸುಖದ ಪರ್ಯಾಯವಾಗಿದೆ. ಸ್ವರ್ಗದಲ್ಲಿ ಜನಿಸಿದ ಅಲ್ಪಸಮಯದಲ್ಲಿ ತರುಣಾವಸ್ಥೆಯು ಅವಧಿಜ್ಞಾನವು ಉದ್ಭವಿಸುತ್ತವೆ. ಅಲ್ಲಿ ಹತ್ತು ವಿಧದ ಕಲ್ಪವೃಕ್ಷಗಳು ಮನೋವಾಂಛಿತ ಸಕಲ ಸುಖಸಾಮಗ್ರಿಗಳನ್ನು ಉಂಟುಮಾಡಿಕೊಡುತ್ತವೆ. ಎಷ್ಟೋ ವರ್ಷಗಳಿಗೊಮ್ಮೆ ಹೊಟ್ಟೆ ಹಸಿವೆ ತೋರುವುದು. ಆಗ ಅವರ ಕಂಠದಲ್ಲಿರುವ ಅಮೃತಪಿಂಡವು ಕರಗಿ ಸಂತೃಪ್ತರಾಗುತ್ತಾರೆ. ದೇವತೆಗಳಿಗೆ ವೃದ್ಧತ್ವವೆಂಬ ಶಂಕೆಯಿಲ್ಲವು. ಸದಾ ಯುವಕಾವಸ್ಥೆಯೇ ಇರುವುದು. ಇಂತಹ ದೇವ-ಪರ್ಯಾಯವು ತಪಸ್ಸು ಮತ್ತು ಧ್ಯಾನಗಳಿಂದಲೂ, ಅಣುವ್ರತ, ಮಹಾವ್ರತ ಧಾರಣೆಯಿಂದಲೂ, ವ್ರತ ಉಪವಾಸದಿಂದಲೂ, ಅರಹಂತದೇವರ ಭಕ್ತಿಯಿಂದಲೂ ಪ್ರಾಪ್ತವಾಗುತ್ತದೆ. ಭವ್ಯರು ಮರೆಯಬಾರದು.

ಮುಂದಕ್ಕೆ ಮನುಷ್ಯಪರ್ಯಾಯದ ಪ್ರಾಪ್ತಿಯ ಕಾರಣ ಹೇಳುತ್ತಾರೆ.

ಪ್ರಶ್ನೆ :- ಕಸ್ಮಿನ್ ಸುಕಾರ್ಯೇ ಚ ಕೃತೇ ವಿಶೇಷೇ ।
ಮೃತ್ವಾ ಭವೇನ್ನಾ ನರಜನ್ಮಧಾರೀ ॥

ಅರ್ಥ :- ಹೇ ಭಗವಾನ್ ! ಯಾವಯಾವ ವಿಶೇಷ ಉತ್ತಮ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಈ ಜೀವನು ಮನುಷ್ಯನಾಗಿ ಜನಿಸುವನೆಂಬುದನ್ನು ಅಪ್ಪಣೆಕೊಡಿಸಬೇಕು.

ಉತ್ತರ :- ದಾನಾರ್ಚನಾದಾರ್ಜವ ಧರ್ಮಯೋಗಾತ್ ।
ಕ್ರೋಧಾದಿ ನಾಶಾತ್ಸಮತಾರಸಾದ್ವಾ ॥



ಮೃತ್ವಾ ಮನುಷ್ಯೋ ಭವತೀಹ ವಿಶ್ವೇ ।
ಪ್ರಿಯಶ್ಚ ಸರ್ವಸ್ಯ ಸುಖಪ್ರದೋಹಿ ॥೧೪೮॥

ಅರ್ಥ :- ಸದಾಕಾಲವು ದಾನ, ದೇವಪೂಜೆ, ಧರ್ಮಕಾರ್ಯಗಳಲ್ಲಿ ತತ್ಪರನೂ, ಭಲ, ಕಪಟಪರಿಣಾಮರಹಿತನೂ, ಕ್ರೋಧಾದಿ ಕಷಾಯಗಳನ್ನು ನಾಶಮಾಡಿದವನೂ ಮತ್ತು ಸಮತಾಭಾವದಲ್ಲಿ ಲೀನನಾದ ಜೀವನು ಮರಣಾನಂತರ ಸಕಲರಿಗೂ ಸುಖಶಾಂತಿಯನ್ನುಂಟುಮಾಡುವ ಶ್ರೇಷ್ಠಮಾನವನಾಗಿಯೇ ಜನಿಸುತ್ತಾನೆ.

ಭಾವಾರ್ಥ :- ಸ್ವಾಭಾವಿಕ ಕೋಮಲ ಪರಿಣಾಮಿಯಾಗುವುದು ಮನುಷ್ಯಪರ್ಯಾಯ ಪ್ರಾಪ್ತಿಗೆ ಕಾರಣವಾಗಿರುತ್ತದೆ. ಕೋಮಲ ಭಾವನೆಯುಳ್ಳವನು ಕ್ರೋಧ, ಮಾನ, ಮಾಯ ಮತ್ತು ಲೋಭ ಈ ನಾಲ್ಕು ಕಷಾಯಗಳಿಂದ ದೂರವಿರುವುದರಿಂದಲೇ ಸಮತಾಪರಿಣಾಮಿಯಾಗುವುದು. ಆ ಸಮತಾಭಾವನೆಯಿಂದ ದೇವಪೂಜೆ, ಜಪ, ತಪಾದಿ ಆತ್ಮಕಲ್ಯಾಣ ಕಾರ್ಯಗಳಲ್ಲಿಯೇ ತನ್ಮಯನಾಗುವನು. ಇಂತಹ ಶ್ರೇಷ್ಠಕಾರ್ಯಗಳನ್ನು ಮಾಡಿರುವುದರ ಮಹತ್ತರ ಫಲವಾಗಿ ಉತ್ತಮ ನರರತ್ನನಾಗಿಯೇ ಅಥವಾ ದೇವನಾಗಿ ಜನಿಸಿ ಸ್ವರ್ಗೀಯ ನಾನಾಭೋಗಾದಿಗಳನ್ನು ಅನುಭವಿಸಿ, ಅಲ್ಲಿಯ ಆಯುಷ್ಯವು ಪೂರ್ಣವಾದೊಡನೆ ಮನುಷ್ಯನಾಗಿ ಜನಿಸಿ ಘೋರತಪಸ್ಸನ್ನು ಆಚರಿಸಿದ ಮೂಲಕ ಕರ್ಮಗಳನ್ನು ನಾಶಮಾಡಿ ಶಾಶ್ವತ ಸುಖವಾದ ಮೋಕ್ಷ ಸುಖವನ್ನು ಪಡೆಯುತ್ತಾನೆ.

ಮುಂದಕ್ಕೆ ಭೋಗಭೂಮಿಜನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ನಾ ಜನ್ಮ ಗೃಹ್ಣಾತಿ ಸುಭೋಗಭೂಮ್ಯಾಂ ॥

ಅರ್ಥ :- ಹೇ ಪರಮ ಗುರುವೇ ! ಯಾವಯಾವ ಪುಣ್ಯಕಾರ್ಯಗಳನ್ನು ಮಾಡಿರುವುದರ ಫಲವಾಗಿ ಈ ಜೀವನು ಭೋಗಭೂಮಿಯಲ್ಲಿ ಉತ್ತಮ ಮನುಷ್ಯನಾಗಲು ಕಾರಣವನ್ನು ಹೇಳಬೇಕು.

ಉತ್ತರ :- ಸ್ವಸೌಖ್ಯಭೋಕ್ತ್ರ ಮುನಯೇऽನ್ನದಾನಂ ।
ದತ್ತಂ ಪ್ರದಾತುಂ ಚ ಕೃತಾಭಿಲಾಷಾ ॥
ಯೇನ ಪ್ರಶಂಸಾ ಮುನಿದಾನದಾತುಃ ।
ಸ ಜಾಯತೇ ವೇತಿ ಸುಭೋಗಭೂಮ್ಯಾಂ ॥೧೪೯॥

ಅರ್ಥ :- ಆತ್ಮಸುಖದಲ್ಲಿ ಪ್ರಯತ್ನಶೀಲರಾದ ಮಹಾಯೋಗಿಗಳಿಗೆ ಆಹಾರದಾನವನ್ನಿತ್ತು ಮತ್ತು ದಾನಕೊಡುವವರನ್ನು ನೋಡಿ ಸಂತೋಷ ಪಡುವ ಮಾನವನು ತನ್ನ ಆಯುಷ್ಯವು ಪೂರ್ಣವಾದೊಡನೆ ಉತ್ತಮ ಭೋಗಭೂಮಿಯಲ್ಲಿ ಜನಿಸುವನು.

ಭಾವಾರ್ಥ :- ರತ್ನತ್ರಯಗಳ ಪರಿಪಾಲಕರು, ಪರಿಶುದ್ಧ ಆತ್ಮನಲ್ಲಿ ಮಗ್ನರಾಗಿರುವ ಮುನಿಪುಂಗವರು ಸಾಕ್ಷಾತ್ ಮೋಕ್ಷಕ್ಕೆ ಪಾತ್ರರಾಗಿರುತ್ತಾರೆ. ಆ ಮಹಿಮರಾದ ಯತಿಗಳು ಉತ್ತಮ ಪಾತ್ರರು. ಅವರಿಗೆ ಆಹಾರವನ್ನು ಕೊಡುವವರು ಮೋಕ್ಷಪ್ರಾಪ್ತಿಗೆ ಸಹಾಯಕರು ಮತ್ತು ಸ್ವಯಂ ಮೋಕ್ಷಸಾಧಕರೂ ಆಗಿರುತ್ತಾರೆ. ಆ ದಾತೃವು ನಿಶ್ಚಯವಾಗಿ ಭೋಗಭೂಮಿಯಲ್ಲಿ ಶ್ರೇಷ್ಠ ಮಾನವರಾಗಿ ಜನಿಸಿ ಅಲ್ಲಿಯ ಸುಖಭೋಗವನ್ನನುಭವಿಸಿ ಪುನಃ ಅಲ್ಲಿಂದ ಸ್ವರ್ಗದಲ್ಲಿ ದೇವನಾಗಿ ನಾನಾ ಭೋಗೋಪಭೋಗಗಳನ್ನು ಅನುಭವಿಸಿ ಮತ್ತೆ ಮಾನವನಾಗಿ ಜನಿಸಿ ಒಂದೆರಡು ಭವಗಳಲ್ಲಿ ಮೋಕ್ಷಲಕ್ಷ್ಮಿಗೆ ಅಧಿಪತಿಯಾಗುವನು. ಹಾಗೆ ಯಾವ ನರನು ಶೀಲವ್ರತಾದಿಗಳನ್ನು ನಿರತಿಚಾರವಾಗಿ ಪಾಲಿಸುವ ಶ್ರಾವಕ-ಶ್ರಾವಿಕೆಯರಿಗೂ, ಐಲಕ-ಕ್ಷುಲ್ಲಕರಿಗೂ, ಆರ್ಯಿಕಾ ಮತ್ತು ಕ್ಷುಲ್ಲಿಕಾದಿಗಳಿಗೂ ಆಹಾರ, ವಸ್ತ್ರ ಮೊದಲಾದ ಯಥಾಯೋಗ್ಯ ವಸ್ತುಗಳನ್ನು ದಾನಮಾಡುವವನು ಮಧ್ಯಮ ಭೋಗಭೂಮಿಯಲ್ಲಿ ಮಾನವನಾಗಿ ಜನಿಸುವನು ಮತ್ತು ಅವ್ರತೀ ಸಮ್ಯಗ್ದೃಷ್ಟಿಗಳಿಗೆ ಆಹಾರ, ವಸ್ತ್ರಾದಿ ಯಥಾಯೋಗ್ಯ ದಾನಕೊಡುವವನು ಜಘನ್ಯ ಭೋಗಭೂಮಿಯಲ್ಲಿ ಮಾನವನಾಗಿ ಜನಿಸುವನು. ಇದೇ ಪ್ರಕಾರ ಮಿಥ್ಯಾತಪಶ್ಚರಣ ವೇಷಧಾರೀ ಸಾಧುಗಳಿಗೆ ದಾನಕೊಡುವವನು ಕುಭೋಗಭೂಮಿಯಲ್ಲಿ ಉತ್ಪನ್ನನಾಗುವನು. ಅಪಾತ್ರಗಳಿಗೆ ದಾನಕೊಡುವುದು ವ್ಯರ್ಥವೆಂದು ತಿಳಿಯಬೇಕು. ದಾನ ಮಾಡಬೇಕೆಂಬ ಅಭಿಲಾಷೆಯು, ಆ ಕಾರ್ಯಕ್ಕೆ ಅನುಮೋದನೆಯು ಮತ್ತು ಆ



ಕಾರ್ಯವನ್ನು ಕಂಡು ಪ್ರಶಂಸಿಸುವನೂ ಕೂಡಾ ಮೇಲೆ ವಿವರಿಸಲ್ಪಟ್ಟ ಫಲಗಳನ್ನು ಪಡೆಯುತ್ತಾನೆ.

ಮುಂದಕ್ಕೆ ಆರ್ಯಾಖಂಡದಲ್ಲಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ! ಮೇ ।
ಶುಭಾರ್ಯಖಂಡೇ ಹಿ ಭವೇನ್ನೃಜನ್ಮ ॥

ಅರ್ಥ :- ಹೇ ದಯಾನಿಧೇ! ಈ ಜೀವನು ಯಾವಯಾವ ಪುಣ್ಯ ಕಾರ್ಯಗಳನ್ನು ಮಾಡಿರುವುದರಫಲವಾಗಿ ಆರ್ಯಾಖಂಡದಲ್ಲಿ ಜನಿಸುವನೆಂಬುದನ್ನು ದಯವಿಟ್ಟು ಅಪ್ಪಣೆಕೊಡಿಸಬೇಕು.

ಉತ್ತರ :- ಜನಾನ್ ಕುವಾಸೇ ವಸತಃ ಪ್ರಗೃಹ್ಯ ।
ಯೋऽಸ್ಥಾಪಯತ್ಸೌಖ್ಯಕರೇ ಸುವಾಸೇ ॥
ದತ್ವಾನ್ನವಸ್ತ್ರಂ ಸುಖದಂ ಪ್ರತುಷ್ಯೇತ್ ।
ಸ್ಯಾದಾರ್ಯಖಂಡೇ ಖಲು ತನ್ನೃಜನ್ಮ ॥೧೫೦॥

ಅರ್ಥ :- ಮಹಾ ಕನಿಷ್ಟಸ್ಥಾನದಲ್ಲಿ ವಾಸಿಸುತ್ತ ನಾನಾ ದುಃಖಗಳನ್ನು ಅನುಭವಿಸುತ್ತಿರುವ ಜೀವಗಳನ್ನು ಸುಖಶಾಂತಿಗಳು ಲಭಿಸುವ ಸ್ಥಾನದಲ್ಲಿ ತಂದಿರಿಸಿ ಅನ್ನ, ವಸ್ತ್ರಾದಿಗಳನ್ನು ಕೊಟ್ಟು ಸಂತೋಷಿಸುವ ಮಾನವನು ಮರಣಾನಂತರ ಆರ್ಯಾಖಂಡದಲ್ಲಿ ಅನುಪಮ ಮನುಷ್ಯ ಶ್ರೇಷ್ಠನಾಗಿ ಜನಿಸುವನು.

ಭಾವಾರ್ಥ :- ಆರ್ಯಾಖಂಡವು ಉತ್ತಮಸ್ಥಾನವಾಗಿರುತ್ತದೆ. ಅದು ಮೋಕ್ಷಮಾರ್ಗ ಪ್ರವೃತ್ತಿಯಾಗುವ ಪಾವನಭೂಮಿಯಾಗಿರುತ್ತದೆ. ಅಲ್ಲಿ ತೀರ್ಥಂಕರರೇ ಮೊದಲಾದ ಮಹಾಮಹಿಮರು, ಮಹಾವ್ರತಿಗಳಾದ ಮುನಿಶ್ರೇಷ್ಠರು ವಿಹರಿಸುತ್ತಾರೆ. ಅನೇಕಜನ ಆರ್ಯಿಕೆಯರು, ಶ್ರಾವಕ-ಶ್ರಾವಿಕೆಯರು, ರತ್ನತ್ರಯ ಧರ್ಮವನ್ನು ಪರಿಪಾಲಿಸುತ್ತಿರುತ್ತಾರೆ. ಇದೇ ಆರ್ಯಾಖಂಡದ ವೈಶಿಷ್ಟ್ಯತೆಯು ಮತ್ತು ಪುಣ್ಯಸಂಪಾದಿಸುವ ಸಾಧನವೂ ಆಗಿರುತ್ತದೆ. ನಿಂದ್ಯಸ್ಥಾನದಲ್ಲಿರುವವರನ್ನು ಉದ್ಧರಿಸಿ ಸುಖಶಾಂತಿಯ ಸ್ಥಾನದಲ್ಲಿ ನಿವಾಸಿ

ಸಲು ಸಕಲ ಸಲಕರಣೆಗಳನ್ನು ಒದಗಿಸಿಕೊಡುವ ಜೀವವು ತನ್ನ ಆಯುಷ್ಯ ಮುಗಿದೊಡನೆ ಆರ್ಯಾಖಂಡದಲ್ಲಿ ಜನಿಸಿ ಧರ್ಮಕಾರ್ಯಗಳನ್ನು ಸಾಧಿಸುತ್ತ, ರತ್ನತ್ರಯಗಳನ್ನು ಪರಿಪಾಲಿಸುತ್ತ ಕ್ರಮೇಣ ಧ್ಯಾನ ತಪಸ್ಸುಗಳ ಮೂಲಕ ಕರ್ಮಶತ್ರುಗಳನ್ನು ನಾಶಮಾಡಿ ಅವಿನಾಶಿ ಮೋಕ್ಷಸುಖವನ್ನು ಪಡೆಯುತ್ತಾರೆ.

ಮುಂದಕ್ಕೆ ಅಲ್ಪ ಭೋಜಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಸ್ವಲ್ಪಾನ್ನಭೋಜೀ ಭವತೀಹ ಭವ್ಯಃ ॥

ಅರ್ಥ :- ಹೇ ಕರುಣಾಸಾಗರನೇ ! ಈ ಜೀವನು ಯಾವ ಪುಣ್ಯ ಕರ್ಮದ ಮಹತ್ತರವಾದ ಫಲವಾಗಿ ಅಲ್ಪಭೋಜಿಯಾಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಸ್ವರಾಜ್ಯ ಕರ್ತ್ರೇ ಮುನಯೇಽನ್ನದಾನಂ ।
ದತ್ವೇತಿ ದೀನಾಯ ಗೃಹಾದಿ ವಸ್ತು ॥
ಸ್ವಲ್ಪಂ ಚ ಭುಕ್ತ್ವಾನಶನೇನ ತುಷ್ಯೇತ್ ।
ಸ್ವಲ್ಪಾನ್ನಭೋಜೀ ಸ ಭವೇದಮುತ್ರ ॥೧೫೧॥

ಅರ್ಥ :- ತಮ್ಮ ಪರಿಶುದ್ಧ ಆತ್ಮನಲ್ಲಿ ರಮಿಸುವ ಶ್ರೇಷ್ಠ ಮುನಿಪುಂಗವರಿಗೆ, ನಿರ್ದೋಷ ಆಹಾರವನ್ನೀಯುವುದು, ದೀನದರಿದ್ರರಿಗೆ ಅನ್ನ, ವಸ್ತ್ರ, ಮನೆ ಮೊದಲಾದ ಸುಖಸಾಮಗ್ರಿಗಳನ್ನು ಒದಗಿಸುವುದು, ಅಲ್ಪಭೋಜನ ಮಾಡಿ ತೃಪ್ತನಾಗುವ ಮಾನವನು ಪರಲೋಕದಲ್ಲಿ ಅಲ್ಪಭೋಜಿಯಾಗಿಯೇ ಜನಿಸುವನು.

ಭಾವಾರ್ಥ :- ಅಧಿಕ ಭುಂಜಿಸುವುದು ಮಹಾದಾರಿದ್ರ್ಯದ ಲಕ್ಷಣವಾಗಿರುತ್ತದೆ. ಅಲ್ಪ ಭೋಜನಮಾಡುವುದು ಭಾಗ್ಯವಂತನ ಸ್ವರೂಪವಾಗಿರುತ್ತದೆ. ಎಲ್ಲ ಪರ್ಯಾಯಗಳಿಗಿಂತ ದೇವಪರ್ಯಾಯದಲ್ಲಿ ಅತ್ಯಲ್ಪ ಭೋಜನ ಪ್ರಮಾಣವು. ಅಲ್ಲಿ ಸಹಸ್ರಾರು ವರ್ಷಗಳಿಗೊಮ್ಮೆ ಹಸಿವೆಬಾಧೆಯು ತಲೆದೋರುವುದು. ಆಗ ಅವರ ಕಂಠದಲ್ಲಿರುವ ಅಮೃತಪಿಂಡವು



ಕರಗುವುದು, ಸಂತೃಪ್ತರಾಗುತ್ತಾರೆ. ಇದೇ ಪ್ರಕಾರವಾಗಿ ಭೋಗಭೂಮಿಯಲ್ಲಿಯೂ ಅಲ್ಪಾಹಾರವು. ಉತ್ತಮ ಭೋಗಭೂಮಿಯಲ್ಲಿ ಮೂರು ದಿನಗಳಿಗೊಮ್ಮೆ ನೆಲ್ಲಿಕಾಯಿ ಪ್ರಮಾಣ ಆಹಾರವು. ಮಧ್ಯಮ ಭೂಮಿಯಲ್ಲಿ ಎರಡು ದಿನಗಳಿಗೊಮ್ಮೆ ಆಹಾರವು ಮತ್ತು ಜಘನ್ಯ ಭೋಗಭೂಮಿಯಲ್ಲಿ ದಿವಸಕ್ಕೊಂದು ಸರ್ತಿ ಆಹಾರವನ್ನು ಸ್ವೀಕರಿಸಿ ಸಂತೃಪ್ತರಾಗುತ್ತಾರೆ. ಕರ್ಮಭೂಮಿಯಲ್ಲಿ ಚತುರ್ಥಕಾಲದಲ್ಲಿ ಪ್ರತಿದಿನವು ಒಂದು ಸರ್ತಿ ಆಹಾರವನ್ನು, ಈಗ ಪಂಚಮ ಕಾಲದಲ್ಲಿ ಪ್ರತಿ ನಿತ್ಯವು ಎರಡು-ಮೂರು ಸರ್ತಿ ಆಹಾರವನ್ನು ಹಾಗೆ ಆರನೆಯ ಕಾಲ ಪ್ರತಿದಿನವು ಎಷ್ಟೋಸರ್ತಿ ಆಹಾರವನ್ನು ಭುಂಜಿಸುತ್ತಾರೆ. ಆದ್ದರಿಂದ ಪುಣ್ಯಶಾಲಿಗಳು ಅಲ್ಪಾಹಾರಿಗಳೆಂದು ಸಿದ್ಧವಾಗುತ್ತದೆ. ಯಾವ ಮಾನವನು ಸರ್ವಸಂಗತ್ಯಾಗಿಗಳಾದ ಮುನಿಗಳಿಗೆ ಆಹಾರದಾನ ಮಾಡುವುದು, ವ್ರತ ಉಪವಾಸಗಳನ್ನು ಮಾಡುವುದು, ಸುಖದುಃಖಗಳಲ್ಲಿ ಸಮಾನಭಾವನೆ ಇರುವವನು ಮರಣವನ್ನು ಹೊಂದಿ ಪರಲೋಕದಲ್ಲಿ ಅಲ್ಪಭೋಜೀ ಮಹಾಪುರುಷನಾಗಿ ಜನಿಸುವನು.

ಮುಂದಕ್ಕೆ ವ್ಯವಹಾರ ಚತುರನಾಗುಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾದ್ಧಿ ಪುಣ್ಯಾಚ್ಚ ವದ ಪ್ರಭೋ ! ಮೇ ।
ಭವೇಚ್ಚ ಭವ್ಯೋ ವ್ಯವಹಾರದಕ್ಷಃ ॥

ಅರ್ಥ :- ಹೇ ಪರಮ ಗುರುವೇ ! ಈ ಜೀವನು ಯಾವಯಾವ ಪುಣ್ಯ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ವ್ಯವಹಾರ ಚತುರನಾಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ವಿದ್ಯಾಕಲಾದೌ ಚತುರಾನ್ ವಿಲೋಕ್ಯ ।
ವಿವೇಕಿನೋ ಜ್ಞಾನಿಜನಸ್ಯ ಶಂಸಾಮ್ ॥
ಕೃತ್ವೇತಿ ತುಷ್ಯೇನ್ಮುನಿ ವರ್ಗಸೇವಾಂ ।
ಭವೇತ್ಸ ಮೃತ್ವಾ ವ್ಯವಹಾರದಕ್ಷಃ ॥೧೫೨॥

ಅರ್ಥ :- ವಿದ್ಯಾ, ಕಲೆ, ಮೊದಲಾದವುಗಳಲ್ಲಿ ಚತುರರಾದವರನ್ನು ಕಂಡು ಸಂತೋಷಪಡುವುದು, ವಿವೇಕಿಗಳನ್ನು, ಜ್ಞಾನಿಗಳನ್ನು ಪ್ರಶಂಸಿಸು